ಈ ಬಗ್ಗೆ ವಿವರಣೆ ನೀಡಿದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಅ ಹೊರಕೇರಿ ಯವರು, ರೈತ ಸದಸ್ಯರ ಹೆಚ್ಚುವರಿ ಮತ್ತು ಹೊಸ ಸದಸ್ಯರಿಗೆ ಸಾಲದ ಬೇಡಿಕೆಗಳ ಈಡೇರಿಕೆಗೆ ಪೂರಕವಾಗಿ ಬ್ಯಾಂಕಿನ ಆಡಳಿತ ಮಂಡಳಿ ನಬಾರ್ಡ, ಅಪೆಕ್ಸ್ ಬ್ಯಾಂಕಿನಿಂದ ದೊರೆಯುವ ಪುನರ್ಧನ ಮಿತಿಯಲ್ಲಿ ಕೊರತೆಯುಂಟಾಗಿರುವ ಹಿನ್ನೆಲೆಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳ ಸಹಯೋಗದಲ್ಲಿ ಸಂಘಗಳು ಕ್ರೂಡೀಕರಿಸುವ ಮೊತ್ತದಷ್ಟೇ ಪ್ರಮಾಣದ ಹಣ ಸೇರಿಸಿ ಆಯಾ ಸಂಘಗಳ ರೈತ ಸದಸ್ಯರ ಹೆಚ್ಚುವರಿ/ಹೊಸ ಸಾಲ ನೀಡಲು ಚಾಲನೆ ನೀಡಲಾಗಿದೆ. ಸದರೀ ಉದ್ದೇಶದ ಸಫಲತೆ ಹಾಗೂ ಸಂಘ ಮತ್ತು ಬ್ಯಾಂಕಿನ ಆರ್ಥಿಕ ಸ್ಥಿತಿಗತಿಯಲ್ಲಿ ಅಸಮತೋಲನ ಉಂಟಾಗದಂತೆ ನೋಡಿಕೊಳ್ಳಬೇಕಿರುವ ಅನಿವಾರ್ಯತೆ ಹಿನ್ನೆಲೆಯಲ್ಲಿ ಸಂಘಗಳು ಇಡುವ ಠೇವಣಾತಿಗೆ 3 ವರ್ಷಗಳ ಕಾಲಮಿತಿ ನಿಗದಿಸಲಾಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸಿಬ್ಬಂದಿಗಳ ಕ್ಷೇಮಾಭಿವೃದ್ಧಿ ಕುರಿತಂತೆ ಸರ್ಕಾರದ ಮಟ್ಟದಲ್ಲಿ ಚಿಂತನಮಂಥನ ನಡೆದಿದೆ. ಬ್ಯಾಂಕಿನಿಂದ ಸಂಘಗಳ ಮುಖ್ಯ ಕಾರ್ಯನಿರ್ವಾಹಕರಿಗೆ, ಆಡಳಿತ ಮಂಡಳಿ ಸದಸ್ಯರಿಗೆ, ಸಾಲಗಾರ ಸದಸ್ಯರಿಗೆ ವಿಮೆ ಮಾಡಿಸುವ ನಿಟ್ಟಿನಲ್ಲಿ ಆಡಳಿತ ಮಂಡಳಿ ಚಿಂತನೆ ನಡೆಸಿದ್ದು, ಇತರೆ ಬ್ಯಾಂಕುಗಳಲ್ಲಿ ಅನುಸರಿಸಿರುವ ಕ್ರಮಗಳನ್ನು ಪರಾಮರ್ಶಿಸಿ ಜಾರಿಗೊಳಿಸಲು ನಿರ್ಧರಿಸಲಾಗಿದೆ. ಬ್ಯಾಂಕಿನ ವ್ಯಾಪ್ತಿಯಲ್ಲಿನ ಎಲ್ಲ ಹಾಲು ಉತ್ಪಾದಕ ಸಹಕಾರ ಸಂಘಗಳ ಹಣಕಾಸಿನ ವ್ಯವಹಾರ ಹೊಂದಲು ಕ್ರಮವಹಿಸಲಾಗಿದ್ದು, ಈ ದಿಶೆಯಲ್ಲಿ ತಾಲೂಕಾ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಸಭೆ ಆಯೋಜಿಸಿ ಸೂಕ್ತ ತಿಳುವಳಿಕೆ ನೀಡಲು ಕ್ರಮವಿಡಲಾಗುತ್ತಿದೆ ಎಂದು ತಿಳಿಸಿದರು.

**4) ಶ್ರೀ ಎಸ್. ಡಿ. ಮುದೇನಗುಡಿ, ಪ್ರತಿನಿಧಿ, ಮುಶಿಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ತಾ:ರೋಣ** ಇವರು ತಮ್ಮ ಸಂಘವು ಉತ್ತಮವಾಗಿ ಕಾರ್ಯನಿರ್ವಹಣೆ ಮಾಡುತ್ತಿರುವ ಬಗ್ಗೆ ಮಾತನಾಡುತ್ತಾ, ಸಂಘದಲ್ಲಿ ಯಾವುದೇ ಕಟಬಾಕಿ ಸಾಲಗಳಿಲ್ಲ. ಸಂಘವು ಸ್ವಂತ ಕಟ್ಟಡ ಹೊಂದಿರುವುದಿಲ್ಲ. ಹಾಲಿ ಇರುವ ಕಟ್ಟಡ ಶಿಥಿಲಾವಸ್ಥೆಯಲ್ಲಿದೆ. ಸಂಘಕ್ಕೆ ಸ್ವಂತ ಕಟ್ಟಡ ಹೊಂದಲು ಉದ್ದೇಶಿಸಲಾಗಿದ್ದು, ಹಾಲಿ ಇರುವ ಕಟ್ಟಡದ ಜಾಗೆಯಲ್ಲಿ ಕಟ್ಟಡ ನಿರ್ಮಿಸಲು ಸ್ಥಳೀಯ ಸಂಸ್ಥೆ/ಆಡಳಿತ ಸಿದ್ಧವಿದೆ. ಕಾರಣ, ಸಂಘವು ಈ ಜಾಗೆಯಲ್ಲಿ ಇರುವ ಕಟ್ಟಡ ದುರಸ್ಥಿಗೆ/ಹೊಸ ಕಟ್ಟಡ ನಿರ್ಮಾಣಕ್ಕೆ ನಬಾರ್ಡ/ಅಪೆಕ್ಸ್ ಬ್ಯಾಂಕಿನಿಂದಾಗಲೀ ಅಥವಾ ಕೆಸಿಸಿ ಬ್ಯಾಂಕಿನಿಂದ ಸೂಕ್ತ ಆರ್ಥಿಕ ನೆರವು ಕಲ್ಪಿಸುವಂತೆ ಸಭಾಧ್ಯಕ್ಷರಲ್ಲಿ ವಿನಂತಿಸಿದರು.

ಈ ಕುರಿತು ಸಭಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಅ ಹೊರಕೇರಿ ಯವರು ಮಾತನಾಡುತ್ತಾ, ಈ ಬಗ್ಗೆ ಸಂಘದಿಂದ ಸೂಕ್ತ ಪ್ರಸ್ತಾವನೆ ಸಲ್ಲಿಸಿದಲ್ಲಿ ಪರಿಶೀಲಿಸಿ ಅಪೆಕ್ಸ್ ಬ್ಯಾಂಕ್/ನಬಾರ್ಡನಿಂದ ಇರುವ ಅವಕಾಶಗಳನ್ನು ಪರಾಮರ್ಶಿಸಿ ಸಂಘಕ್ಕೆ ಆರ್ಥಿಕ ನೆರವು ಕಲ್ಪಿಸಲು ಅಗತ್ಯ ಕ್ರಮವಿಡುವುದಾಗಿ ತಿಳಿಸಿದರು.

**5) ಶ್ರೀ ಮಹೇಶ ಎನ್. ಕೊಟ್ಟೂರ, ಪ್ರತಿನಿಧಿ, ಸುತಕೋಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ತಾ:ಹಿರೇಕೆರೂರು** ಇವರು ಮಾತನಾಡುತ್ತಾ, ಪ್ರಸ್ತುತ ಬ್ಯಾಂಕು ರೈತ ಸದಸ್ಯರಿಗೆ ನೀಡುತ್ತಿರುವ ಸಾಲದ ಪ್ರಮಾಣ ಅತ್ಯಂತ ಕನಿಷ್ಟ ಮಟ್ಟದಲ್ಲಿದೆ. ರೈತ ಸದಸ್ಯರ ಭೂಹಿಡುವಳಿ ಆಧರಿಸಿ ಸಾಲದ ಪ್ರಮಾಣವನ್ನು ಹೆಚ್ಚಿಸುವಂತೆ ಸಭಾಧ್ಯಕ್ಷರಲ್ಲಿ ವಿನಂತಿಸಿದರು.

ಈ ಕುರಿತು ಸಭಾಧ್ಯಕ್ಷರು ವಿವರಿಸುತ್ತಾ, ಈಗಾಗಲೇ ಆಡಳಿತ ಮಂಡಳಿಯಲ್ಲಿ ಚರ್ಚಿಸಲಾಗಿದ್ದು, ನಬಾರ್ಡ ಪುನರ್ಧನ, ಬ್ಯಾಂಕಿನ ಸಾಂಪತ್ತಿಕ ಸ್ಥಿತಿಗತಿ ಆಧರಿಸಿ ರೈತ ಸದಸ್ಯರ ಭೂಹಿಡುವಳಿ, ಸ್ಕೇಲ್ ಆಫ್ ಫೈನಾನ್ಸ , ಹೊಸ ಸದಸ್ಯರಿಗೆ ಸಾಲ ನೀಡಿಕೆ ಬಗ್ಗೆ ಚಿಂತನಮಂಥನ ನಡೆಸಲಾಗಿದೆ ಮತ್ತು ಸಾಲ ನೀಡಿಕೆ ಪ್ರಮಾಣವನ್ನು ಹೆಚ್ಚಳ ಮಾಡಲು ಕ್ರಮವಿಡಲಾಗಿದೆ ಎಂದು ವಿವರಿಸಿದರು.

**6) ಶ್ರೀ ವೀರಭದ್ರಪ್ಪ ಮಾ ಮನ್ನಂಗಿ, ಪ್ರತಿನಿಧಿ, ಗುಂಡೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,** ಇವರು ಮಾಧ್ಯಮಿಕ ಕೃಷಿ ಸಾಲದ ಯೋಜನೆಯಡಿ ಟ್ರ್ಯಾಕ್ಟರ್ ಖರೀದಿಸಲು ನೀಡಲಾಗುತ್ತಿದ್ದ ಸಾಲಗಳಿಗೆ ಆಧಾರವಾಗಿ ಸಾಲಗಾರ ಸದಸ್ಯನಿಗೆ 12 ಎಕರೆ ಜಮೀನು ಇರಬೇಕೆಂಬ ನಿಯಮದಿಂದ ಬಹಳ ಜನ ಸಣ್ಣ ಹಿಡುವಳಿದಾರ ರೈತ ಸದಸ್ಯರಿಗೆ ತೊಂದರೆಯಾಗಿದೆ. ಆದ್ದರಿಂದ, ಸದರೀ ಷರತ್ತನ್ನು ಸಡಿಲಿಸಿ 5 ಎಕರೆಗೆ ನಿಗದಿ ಮಾಡುವಂತೆ ಸಭಾಧ್ಯಕ್ಷರನ್ನು ವಿನಂತಿಸಿದರು.

ಈ ಕುರಿತಂತೆ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎಸ್. ವ್ಹಿ. ಹೂಗಾರ ರವರು ವಿವರಣೆ ನೀಡುತ್ತಾ, ನಬಾರ್ಡನ ಟೆಕ್ನೋ ಎಕಾನಾಮಿಕ್ ಪ್ಯಾರಾಮೀಟರ್ (Techno Economic Parameters) ನಲ್ಲಿ ಅಳವಡಿಸಲಾಗಿರುವ ಮಾನದಂಡ ಹಾಗೂ ಇತರೆ ಡಿಸಿಸಿ ಬ್ಯಾಂಕುಗಳು ಅನುಸರಿಸುತ್ತಿರುವ ಕ್ರಮಗಳ ಬಗ್ಗೆ ಮಾಹಿತಿ ಪರಾಮರ್ಶಿಸಿ ನೀರಾವರಿ ಇದ್ದಲ್ಲಿ 5 ಎಕರೆ ಹಾಗೂ ಒಣಬೇಸಾಯ ಇದ್ದಲ್ಲಿ 8 ಎಕರೆ ಜಮೀನು 30 ಎಚ್.ಪಿ. ಟ್ರ್ಯಾಕ್ಟರ ಖರೀದಿಸಲು ಮತ್ತು 6 ಎಕರೆ (ನೀರಾವರಿ)/10 ಎಕರೆ (ಒಣಬೇಸಾಯ) ಇದ್ದಲ್ಲಿ 30

ಎಚ್.ಪಿ. ಟ್ರ್ಯಾಕ್ಟರ್ ಸಾಲ ನೀಡಲು ದಿ:01-07-2022 ರಿಂದ ನಿಯಮಗಳಲ್ಲಿ ಪರಿಷ್ಕರಣೆ ಮಾಡಲಾಗಿರುವುದನ್ನು ತಿಳಿಯಪಡಿಸಿದರು. ಇದರ ಸದುಪಯೋಗವನ್ನು ಅರ್ಹ ರೈತ ಸದಸ್ಯರಿಗೆ ಕಲ್ಪಿಸಲು ವಿನಂತಿಸಿದರು.

**7) ಶ್ರೀಅಶೋಕರಡ್ಡಿ ಹ ಮರ್ಚರಡ್ಡೇರ, ಪ್ರತಿನಿಧಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಬೆಳವಿಗಿ (ತಾ:ಹಾವೇರಿ)** ರವರು ಮಾತನಾಡುತ್ತಾ, ತಮ್ಮ ಸಂಘದ ಸದಸ್ಯರಿಗೆ ನಬಾರ್ಡನ ಮಾಧ್ಯಮಿಕ ಕೃಷಿ ಸಾಲ ಯೋಜನೆಯಡಿ ಕಬ್ಬು ಕಟಾವು ಮಶೀನ್ ಖರೀದಿ ಸಾಲವನ್ನು ನೀಡಲಾಗಿದ್ದು, ಸದರಿ ಸಾಲ ಮರುಪಾವತಿಗೆ ಪ್ರತೀ ಆರು ತಿಂಗಳಿಗೆ ಕಂತು ನಿಗದಿಪಡಿಸಲಾಗಿದೆ. ಆದರೆ, ವಾಡಿಕೆಯಂತೆ ಕಬ್ಬು ಅರೆಯುವ ಸೀಸನ್ ವರ್ಷದಲ್ಲಿ ಆರು ತಿಂಗಳು ಮಾತ್ರ ಇರುವ ಕಾರಣ ಸಾಲ ಮರುಪಾವತಿ ಅವಧಿಯನ್ನು ಆರು ತಿಂಗಳ ಬದಲಿಗೆ ಒಂದು ವರ್ಷಕ್ಕೆ ಮಾರ್ಪಾಡು ಮಾಡಬೇಕೆಂದು ಸಭಾಧ್ಯಕ್ಷರಲ್ಲಿ ವಿನಂತಿಸಿದರು.

ಈ ಕುರಿತು ಸಭಾಧ್ಯಕ್ಷರು ವ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಅ ಹೊರಕೇರಿ ರವರು ವಿವರಣೆ ನೀಡುತ್ತಾ, ನಬಾರ್ಡನ ಮಾಧ್ಯಮಿಕ ಸಾಲ ನೀಡಿಕೆ ಯೋಜನೆಯಡಿ ನಿಗದಿಪಡಿಸಿದ ಮಾರ್ಗಸೂಚಿ ನಿರ್ದೇಶನಗಳಂತೆ ಕಂತುಗಳನ್ನು ನಿಗದಿಪಡಿಸಲಾಗಿದೆ. ಈ ಸಂಬಂಧ ಕಬ್ಬು ಬೆಳೆಗಾರ ರೈತ ಸದಸ್ಯರ ಹಿತ ಹಾಗೂ ಕಬ್ಬು ಬೆಳೆಯುವ ಸೀಸನ್‌ಗಳನ್ನು ಗಮನದಲ್ಲಿಟ್ಟುಕೊಂಡು ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಪರಾಮರ್ಶಿಸಿ ನಬಾರ್ಡನ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಕಂತು ಮಾರ್ಪಾಡು ಮಾಡಲು ಇರುವ ಅವಕಾಶಗಳ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಿದರು.

**8) ಶ್ರೀ ಟಿ. ಎಸ್. ಪಾಟೀಲ, ಪ್ರತಿನಿಧಿ, ಕಮಲಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., (ತಾ:ಧಾರವಾಡ)** ಇವರು ಅಖಂಡ ಕೆ.ಸಿ.ಸಿ. ಬ್ಯಾಂಕನ್ನು ವಿಭಜನೆ ಮಾಡುವ ಕುರಿತಂತೆ ಮಾತನಾಡುತ್ತಾ, ಸರ್ಕಾರ, ಆರ್.ಬಿ.ಐ. ಮತ್ತಿತರ ಸಕ್ಷಮ ಪ್ರಾಧಿಕಾರಗಳ ನಿಯಮ/ಮಾನದಂಡಗಳಡಿ ಧಾರವಾಡ, ಹಾವೇರಿ ಮತ್ತು ಗದಗ ಜಿಲ್ಲೆಗಳಿಗೆ ಪ್ರತ್ಯೇಕ ಡಿಸಿಸಿ ಬ್ಯಾಂಕು ರಚನೆ ಮಾಡಲು ಇರುವ ಅವಕಾಶಗಳನ್ನು ಪರಾಮರ್ಶಿಸಿ ಆ ಪ್ರಕಾರ ಕ್ರಮವಿಡಲು ಸಭಾಧ್ಯಕ್ಷರನ್ನು ವಿನಂತಿಸಿದರು.

ಸಭಾಧ್ಯಕ್ಷರು ಹಾಗೂ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಅ ಹೊರಕೇರಿ ಯವರು ವಿವರಣೆ ನೀಡುತ್ತಾ, ಈ ಕುರಿತಂತೆ ಈ ಹಿಂದೆ ಜರುಗಿದ ವಾರ್ಷಿಕ ಮಹಾಸಭೆಗಳಲ್ಲಿ ಕೈಗೊಂಡ ನಿರ್ಣಯದ ಪ್ರಕಾರ ಸರ್ಕಾರ/ನಬಾರ್ಡ/ಆರ್.ಬಿ.ಆಯ್. ಗಳಿಗೆ ಬ್ಯಾಂಕಿನಿಂದ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ, ಸದರೀ ಪ್ರಸ್ತಾವನೆಗೆ ನಬಾರ್ಡ ಮತ್ತು ಆರ್.ಬಿ.ಆಯ್.ದಿಂದ ಪುರಸ್ಕರಿಸಿಲ್ಲವೆಂದು ತಿಳಿಸಿದರು.

ಇನ್ನುಳಿದಂತೆ ಬೇರಾವುದೇ ಸದಸ್ಯ ಪ್ರತಿನಿಧಿಗಳಿಂದ ವಿಷಯ ಚರ್ಚೆಗೆ ಬಾರದೇ ಇರುವುದನ್ನು ಗಮನಿಸಲಾಯಿತು.

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ ನಿ., ಬೆಂಗಳೂರು ಇವರು ಸನ್ 2020-21ನೇ ಸಾಲಿಗೆ ಕಾರ್ಯವ್ಯಾಪ್ತಿಯಲ್ಲಿನ 10 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ನಿಗದಿಪಡಿಸಿದ ಮಾನದಂಡಗಳಡಿ ಅರ್ಹತೆ ಪಡೆದ ಹಿನ್ನೆಲೆಯಲ್ಲಿ ಉತ್ತಮ ಸಂಘಗಳೆಂದು ಗುರುತಿಸಿದ ಹಿನ್ನೆಲೆಯಲ್ಲಿ (1) ಮಂಟೂರ (2) ಕಲಘಟಗಿ ನಂ.1 (3) ಬು.ತರ್ಲಘಟ್ಟ (4) ನೀರಲಗಿ (5) ಮಾರನಬಸರಿ (6) ಹೆಬ್ಬಾಳ (7) ಕದರಮಂಡಲಗಿ (8) ಮಾರನಬೀಡ (9) ದೂದಿಹಳ್ಳಿ (10) ಮಣಕಟ್ಟಿ ಸಂಘಗಳ ಪದಾಧಿಕಾರಿಗಳನ್ನು/ಮುಖ್ಯ ಕಾರ್ಯನಿರ್ವಾಹಕರನ್ನು ಸಭೆಯಲ್ಲಿ ಸನ್ಮಾನಿಸಲಾಯಿತು.

ಅದೇ ರೀತಿಯಾಗಿ ಬ್ಯಾಂಕಿನ ಸನ್ 2021-22ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನೆಗೈದ ಮೇ:ಬಿ. ಆರ್. ಆರ್. ಮತ್ತು ಕಂಪನಿ, ಚಾರ್ಟರ್ಡ ಅಕೌಂಟಂಟರಾದ ಶ್ರೀ ರಾಜೇಶ ಎಮ್ ಕಾಜಗಾರ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕೊನೆಯಲ್ಲಿ ಸಭೆಗೆ ಹಾಜರಾಗಿ ಎಲ್ಲ ಸದಸ್ಯ ಸಂಘಗಳ ಪ್ರತಿನಿಧಿಗಳಿಗೆ, ಪದಾಧಿಕಾರಿಗಳಿಗೆ, ಸದಸ್ಯರುಗಳಿಗೆ ವಂದನೆಗಳನ್ನು ಸಲ್ಲಿಸುವುದರೊಂದಿಗೆ ಸಭೆ ಮುಕ್ತಾಯವಾಯಿತು.

| | |
|---|---|
| ಸಹಿ/- | ಸಹಿ/- |
| ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು | ಅಧ್ಯಕ್ಷರು, |
| ಕೆ. ಸಿ. ಸಿ. ಬ್ಯಾಂಕ ಲಿ., ಧಾರವಾಡ | ಕೆ.ಸಿ.ಸಿ. ಬ್ಯಾಂಕ ಲಿ., ಧಾರವಾಡ. |

**ವಿಷಯ-3 :**

**ಸನ್ 2022-23 ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಗಣಿಸುವುದು.**

# 107 ನೇ ವಾರ್ಷಿಕ ವರದಿ

ಸಹಕಾರಿ ಬಂಧುಗಳೇ,

ಐತಿಹಾಸಿಕ ಕೆ.ಸಿ.ಸಿ. ಬ್ಯಾಂಕಿಗೆ ಜನ್ಮ ನೀಡಿದ ಪ್ರಾತ:ಸ್ಮರಣೀಯ ದಿವಾನಬಹದ್ದೂರ್ ಶಾಂತವೀರಪ್ಪ ವ್ಹಿ. ಮೆಣಸಿನಕಾಯಿ ಹಾಗೂ ಮುಖ್ಯ ಪ್ರವರ್ತಕರಾದ ರಾವ್‌ಬಹದ್ದೂರ ರುದ್ರಗೌಡರು ಸಿ. ಅರಟಾಳ ರವರ ಪಾದಗಳಿಗೆ ನಮಸ್ಕರಿಸುತ್ತಾ, ತಮ್ಮೆಲ್ಲರ ಪ್ರೀತಿ, ವಿಶ್ವಾಸ, ಸಹಾಯ, ಸಹಕಾರದ ಫಲವಾಗಿ 107 ವರ್ಷಗಳ ಸಾರ್ಥಕ ಸೇವೆ ಪೂರೈಸಿ ಪ್ರಗತಿಪಥದಲ್ಲಿ ಸಾಗಿರುವ ಬ್ಯಾಂಕಿನ 107 ನೇ ವಾರ್ಷಿಕ ಮಹಾಸಭೆಗೆ ತಮ್ಮನ್ನು ಸ್ವಾಗತಿಸುವ ಸೌಭಾಗ್ಯ ನನ್ನದಾಗಿದೆ. ತಮಗೆಲ್ಲ ನನ್ನ ಹೃದಯಪೂರ್ವಕ ಸ್ವಾಗತ ಕೋರುತ್ತೇನೆ.

ಸನ್ 1916 ರಲ್ಲಿ ಕಾರ್ಯಾರಂಭ ಮಾಡಿದ ಈ ಬ್ಯಾಂಕು 107 ವರ್ಷಗಳ ಇತಿಹಾಸ ಹೊಂದಿದೆ. 41 ಜನ ವ್ಯಕ್ತಿದಾರರ ಹಾಗೂ 71 ಸಹಕಾರ ಸಂಘಗಳ ಸದಸ್ಯರನ್ನು ಹೊಂದಿದ್ದ ಬ್ಯಾಂಕು ಪ್ರಸ್ತುತ 1573 ಸದಸ್ಯ ಸಂಘಗಳ ಹಾಗೂ 59003 ಸಹ ಸದಸ್ಯರುಗಳನ್ನು ಹೊಂದಿದೆ. ರೂ. 9517.29 ಲಕ್ಷ ಶೇರು ಭಂಡವಾಳ ಹಾಗೂ ರೂ.173278.21 ಲಕ್ಷಗಳ ದುಡಿಯುವ ಭಂಡವಾಳದೊಂದಿಗೆ ಸದ್ಯಕ್ಕೆ 48 ಶಾಖೆಗಳ ಹಾಗೂ 545 ಪ್ರಾ.ಕೃ.ಪ.ಸ. ಸಂಘಗಳ ಮೂಲಕ ಮೂಲ ಉದ್ದೇಶಗಳಾದ ಕೃಷಿ ಬೆಳೆಸಾಲ ಹಾಗೂ ಕೃಷಿ ಮಾಧ್ಯಮಿಕ ಸಾಲಗಳ ಜೊತೆಗೆ ರೈತರ ಉಪ ಕಸಬು, ವ್ಯವಹಾರಗಳಿಗೆ ಕಿಸಾನ ಬಳಕೆ ಸಾಲ ಮತ್ತು ಕೃಷಿಯೇತರ ಸಾಲ ಯೋಜನೆಯಡಿ ವಿವಿಧ ಉದ್ದೇಶಗಳಿಗೆ ಸಾಲಗಳನ್ನು ಒದಗಿಸುತ್ತಲಿದೆ.

ಬ್ಯಾಂಕಿನ ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ ಕಾಯ್ದುಕೊಂಡು ರೈತಾಪಿವರ್ಗದ ಬಗ್ಗೆ ಕಳಕಳಿ, ಗ್ರಾಹಕ ಸ್ನೇಹಿಯಾಗಿ ವ್ಯಕ್ತಿದಾರ/ಸಂಘ-ಸಂಸ್ಥೆಗಳೊಂದಿಗೆ ಉತ್ತಮ ಸೌಹಾರ್ದಯುತ ಬಾಂಧವ್ಯ ಕಾಪಾಡಿಕೊಂಡು ವ್ಯವಹಾರಗಳನ್ನು ಪ್ರಗತಿದಾಯಕವಾಗಿ ನಡೆಸುವ ಧ್ಯೇಯದೊಂದಿಗೆ ಮುನ್ನೆಡೆದಿದೆ. ಬ್ಯಾಂಕಿನ ಮೇಲೆ ವಿಶ್ವಾಸವಿಟ್ಟು ತಮ್ಮೆಲ್ಲ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುತ್ತಾ, ಬ್ಯಾಂಕಿನ ಪ್ರಗತಿಗೆ ಕಾರಣೀಭೂತರಾಗಿರುವ ತಮ್ಮೆಲ್ಲರಿಗೂ ಬ್ಯಾಂಕಿನ ಆಡಳಿತ ಮಂಡಳಿ ತುಂಬುಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಸನ್ 2013 ರಿಂದ ತಂತ್ರಜ್ಞಾನ ಆಧಾರಿತ ಕೋರ್ ಬ್ಯಾಂಕಿಂಗ್ ಸೇವೆಗಳನ್ನು ನೀಡುತ್ತಾ ಇತರೆ ರಾಷ್ಟ್ರೀಕೃತ/ವಾಣಿಜ್ಯ ಬ್ಯಾಂಕುಗಳಿಗೆ ಸ್ಪರ್ಧಾತ್ಮಕವಾಗಿ ಕಾರ್ಯನಿರ್ವಹಣೆ ಮಾಡುತ್ತಲಿದ್ದು, ತಾವೆಲ್ಲರೂ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ವಿನಂತಿಸುತ್ತೇವೆ.

# ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ ಲಿ.,ಧಾರವಾಡ

ಸನ್ 2022-23ನೇ ಸಾಲಿನ ವರದಿ ವರ್ಷದ ಆರ್ಥಿಕ ವ್ಯವಹಾರಗಳ ವಿವರ

1) **ಸದಸ್ಯತ್ವ ಹಾಗೂ ಪಾಲು ಬಂಡವಾಳ:**

ಬ್ಯಾಂಕಿನ ಸದಸ್ಯತ್ವ ಪಾಲು ಭಂಡವಾಳ ವಿವರ ಈ ಕೆಳಗಿನಂತಿರುತ್ತದೆ. (ರೂ. ಲಕ್ಷಗಳಲ್ಲಿ)

| ಅ ನಂ | ವಿವರ | 31-3-2022 | | 31-3-2023 | |
|---|---|---|---|---|---|
| | | ಸಂಖ್ಯೆ | ಪಾಲು ಬಂಡವಾಳ | ಸಂಖ್ಯೆ | ಪಾಲು ಬಂಡವಾಳ |
| 1 | ಸಹಕಾರಿ ಸಂಘಗಳು | 1562 | 6666.68 | 1573 | 7831.96 |
| 2 | ರಾಜ್ಯ ಸರಕಾರ | 1 | 423.00 | 1 | 423.00 |
| 3 | ಸಹ ಸದಸ್ಯರು | 54951 | 1018.64 | 59003 | 1262.33 |
| | **ಒಟ್ಟು** | **56514** | **8108.32** | **60577** | **9517.29** |

ವಿ.ಸೂ: ವರದಿ ಸಾಲಿನಲ್ಲಿ ರೂ.1408.97 ಲಕ್ಷ ಶೇರು ಬಂಡವಾಳ ಹೆಚ್ಚಳವಾಗಿದೆ.

2) **ಬ್ಯಾಂಕಿನ ನಿಧಿಗಳು:**

ಬ್ಯಾಂಕು ಸಂಚಯಿಸಿದ ನಿಧಿಗಳ ವಿವರ ಕೆಳಗಿನಂತಿದೆ. (ರೂ. ಲಕ್ಷಗಳಲ್ಲಿ)

| ಅ ನಂ | ವಿವರ | 31-3-2022 | 31-3-2023 |
|---|---|---|---|
| 1 | ಕಾಯ್ದಿಟ್ಟ ನಿಧಿ | 839.66 | 989.24 |
| 2 | ಒಕ್ಕಲುತನ ಸ್ಥಿರೀಕರಣ ನಿಧಿ | 291.47 | 381.18 |
| 3 | ಕಟ್ಟಡ ನಿಧಿ | 343.57 | 447.68 |
| 4 | ಮುಳುಗುವ ಸಾಲದ ನಿಧಿ | 301.86 | 333.85 |
| 5 | ಇತರೆ ನಿಧಿಗಳು | 318.19 | 1034.47 |
| | **ಒಟ್ಟು** | **2715.92** | **3186.42** |

ವಿ.ಸೂ: ಬ್ಯಾಂಕಿನ ನಿಧಿಗಳಲ್ಲಿ ರೂ. 470.50 ಲಕ್ಷ ಹೆಚ್ಚಳವಾಗಿದೆ.

3) **ಠೇವಣಾತಿಗಳು :**

ಬ್ಯಾಂಕಿನ ಅಭಿವೃದ್ದಿ ಕ್ರೀಯಾ ಯೋಜನೆ ಯಶಸ್ವಿಗೊಳಿಸಲು ಹಣಕಾಸಿನ ಸಂಪನ್ಮೂಲಗಳ ಕ್ರೂಡೀಕರಣದ ಅಗತ್ಯವಿದೆ. ಈ ದಿಶೆಯಲ್ಲಿ ಠೇವು ಸಂಗ್ರಹಣೆ ಮಾಡಲಾಗುತ್ತಿದೆ. ಈ ಕುರಿತು ಶಾಖೆಗಳಿಗೆ ಗುರಿ ನಿಗದಿ ಮಾಡಲಾಗಿದೆ. ಸದಸ್ಯ ಸಂಘಗಳ ಎಲ್ಲ ಹಣಕಾಸಿನ ವ್ಯವಹಾರ ಬ್ಯಾಂಕಿನೊಂದಿಗೆ ಜರುಗಿಸುವ ಅವಶ್ಯವಿದೆ. ವರದಿ ವರ್ಷದ ಠೇವಣಾತಿ ವಿವರ ಕೆಳಗಿನಂತಿವೆ. (ರೂ. ಲಕ್ಷಗಳಲ್ಲಿ)

| ಅನಂ | ವಿವರ | 31-3-2022 | 31-3-2023 |
|---|---|---|---|
| 1 | ವ್ಯಕ್ತಿದಾರರಿ0ದ | 47803.18 | 52527.45 |
| 2 | ಸ0ಘ ಸ0ಸ್ಥೆಗಳಿ0ದ | 35384.05 | 43838.42 |
| | **ಒಟ್ಟು** | **83187.23** | **96365.87** |

ಬ್ಯಾಂಕಿನ ಮೇಲೆ ವಿಶ್ವಾಸವಿಟ್ಟು ಠೇವಣಾತಿ ತೊಡಗಿಸಿರುವ ಮತ್ತು ಹಣಕಾಸಿನ ವ್ಯವಹಾರಗಳನ್ನು ಬ್ಯಾಂಕಿನಲ್ಲಿ ನಿರ್ವಹಣೆ ಮಾಡುತ್ತಾ ಬರುತ್ತಿರುವ ಎಲ್ಲ ವ್ಯಕ್ತಿದಾರ ಗ್ರಾಹಕರಿಗೆ ಮತ್ತು ಸದಸ್ಯ ಸಂಘಗಳಿಗೆ ತು0ಬು ಹೃದಯದ ವಂದನೆಗಳನ್ನು ಸಲ್ಲಿಸುತ್ತೇನೆ. ಮುಂದೆಯೂ ಕೂಡ ತಮ್ಮೆಲ್ಲರ ಸಹಕಾರ ನೀಡಲು ವಿನಂತಿಸುತ್ತೇವೆ.

**4) ಪಡೆದ ಸಾಲಗಳು:**

ಬ್ಯಾಂಕು ಕಾರ್ಯವ್ಯಾಪ್ತಿಯಲ್ಲಿನ ರೈತ ಸದಸ್ಯರಿಗೆ ಮತ್ತು ಗ್ರಾಹಕರಿಗೆ ಹೆಚ್ಚಿನ ಸೇವಾ ಸೌಲಭ್ಯಗಳನ್ನು ಕಲ್ಪಿಸಲು ಅಭಿವೃದ್ದಿಪರ ಕಾರ್ಯ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಾ ಬಂದಿದೆ. ಇದಕ್ಕೆ ಪೂರಕವಾಗಿ ನಬಾರ್ಡ, ಅಪೆಕ್ಸ್ ಬ್ಯಾಂಕಿನಿಂದ ಪುನರ್ಧನ ಸಾಲ ಸೌಲಭ್ಯಗಳನ್ನು ಪಡೆಯುವುದರ ಜೊತೆಗೆ ಠೇವು ಸಂಗ್ರಹಣೆ ಮತ್ತಿತರ ಆಂತರಿಕ ಸಂಪನ್ಮೂಲಗಳ ಕ್ರೂಡೀಕರಣ ಮಾಡುವ ಮೂಲಕ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ. ನಬಾರ್ಡ /ಅಪೆಕ್ಸ ಬ್ಯಾಂಕಿನಿಂದ ಸನ್ 2021-22 ಹಾಗೂ 2022-23ನೇ ಸಾಲಿನಲ್ಲಿ ಪಡೆದ ಸಾಲಗಳ ವಿವರ ಕೆಳಗಿನಂತಿವೆ. (ರೂ. ಲಕ್ಷಗಳಲ್ಲಿ)

| ಅ ನಂ | ವಿವರ | 2021-22 | 2022-23 |
|---|---|---|---|
| 1 | ಅಲ್ಪಾವಧಿ ಬೆಳೆಸಾಲ (ಸಾಮಾನ್ಯ) | 20600.00 | 46500.00 |
| 2 | ಅಲ್ಪಾವಧಿ (ಕೋವಿಡ್-19) | 4100.00 | -- |
| 3 | ಮಾಧ್ಯಮಿಕ ಸಾಲ<br>ಅ) ಪಿ.ಓ.ಡಿ.ಎಫ್. | | |
| | ಅ) ಎಂ.ಟಿ. (ಸ್ಕಿಮ್ಯಾಟಿಕ್) | 24.04 8202.17 | 7.86 9551.96 |
| 4 | ನಗದುಪತ್ತಿನ ವ ಇತರ ಸಾಲಗಳು:<br>ಅ) ಸ್ವಸಹಾಯ ಗುಂಪುಗಳಿಗೆ ಸಿ.ಸಿ | | |
| | ಬ) PACS as MSC | 219.19 | 697.26 |
| 5 | ಇತರೆ | -- | -- |
| | **ಒಟ್ಟು** | **33145.40** | **56757.09** |

**5) ಬ್ಯಾಂಕಿನಿಂದ ವಿತರಿಸಿದ ಸಾಲಗಳು :**

ಬ್ಯಾಂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಕೃಷಿ ಬೆಳೆಸಾಲ ಮತ್ತು ಮಧ್ಯಮಾವಧಿ ಸಾಲಗಳ ಜೊತೆಗೆ ಬ್ಯಾಂಕಿನ ಖರ್ಚುವೆಚ್ಚಗಳ ನಿಭಾವಣೆಗೆ ಆದಾಯ ತರುವ ಕೃಷಿಯೇತರ ಸಾಲಗಳನ್ನು ನೀಡುತ್ತಾ ಬಂದಿದೆ. ಸನ್ 2021-22 ಹಾಗೂ 2022-23 ನೇ ಸಾಲುಗಳಲ್ಲಿ ವಿತರಿಸಿದ ಸಾಲಗಳ ವಿವರ ಕೆಳಗಿನಂತಿವೆ (ರೂ. ಲಕ್ಷಗಳಲ್ಲಿ)

| ಅನ | ವಿವರ | 2021-22 | 2022-23 |
|---|---|---|---|
| 1 | ಕೃಷಿ ಸಾಲ :<br>ಅ) ಅಲ್ಪಾವಧಿ ಬೆಳೆಸಾಲ | 49001.17 | 65730.26 |
| | ಬ) ಮಧ್ಯಮಾವಧಿ ಕೃಷಿ | 4148.17 | 5215.95 |
| | ಕ) ಮಧ್ಯಮಾವಧಿ (ಪರಿವರ್ತಿತ) | -- | -- |
| 2 | ಕೃಷಿಯೇತರ ಸಾಲ - | 22225.98 | 28199.52 |
| 3 | ನಗದು ಪತ್ತಿನ ಸಾಲ - | 9613.42 | 9491.64 |
| | **ಒಟ್ಟು** | **84988.74** | **108637.37** |

ವಿ.ಸೂ: ವರದಿ ಸಾಲಿನಲ್ಲಿ ಬ್ಯಾಂಕು 3 ಜಿಲ್ಲೆಗಳ ವ್ಯಾಪ್ತಿಯಲ್ಲಿ;

- ✓ 103651 ರೈತ ಸದಸ್ಯರಿಗೆ ಶೂನ್ಯ ಬಡ್ಡಿದರದಲ್ಲಿ ರೂ.65730.26 ಲಕ್ಷ ಬೆಳೆಸಾಲ ವಿತರಿಸಿದೆ.
- ✓ 1011 ರೈತ ಸದಸ್ಯರಿಗೆ ರೂ.5215.95 ಲಕ್ಷಗಳ ಮಾಧ್ಯಮಿಕ ಸಾಲವನ್ನು ವಿತರಿಸಿದೆ.
- ✓ ಕೃಷಿಯೇತರ ಸಾಲ ಯೋಜನೆಯಡಿ (ಬಂಗಾರ / ವೇತನ ಆಧಾರಿತ / ವಾಹನ / ಗೃಹನಿರ್ಮಾಣ / ವಾಣಿಜ್ಯ ಸಂಕೀರ್ಣ / ಕೆಸಿಸಿ ಬಳಕೆ ಸಾಲ/ ಫ್ಯಾಕ್ಸ ಗಳನ್ನು ಬಹುಸೇವಾ ಕೇಂದ್ರಗಳನ್ನಾಗಿಸಲು / ಸಿಸಿ ಸಾಲ) ರೂ.37691.16 ಲಕ್ಷಗಳ ಸಾಲ ವಿತರಣೆ ಮಾಡಲಾಗಿದೆ.

**6) ಸಾಲಗಳ ವಸೂಲಾತಿ :**

ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ನೀಡಲಾದ ಸಾಲಗಳ ಸಕಾಲಿಕ ವಸೂಲಾತಿ ಕಾರ್ಯ ಅತ್ಯಂತ ಸವಾಲಿನದ್ದಾಗಿದೆ. ಕಟಬಾಕಿ ಸಾಲದ ಪ್ರಮಾಣ ಹೆಚ್ಚಳವಾದ ಪಕ್ಷದಲ್ಲಿ ಬ್ಯಾಂಕಿನ ಸಾಂಪತ್ತಿಕ ಸ್ಥಿತಿಯಲ್ಲಿ ಏರುಪೇರಾಗಲು ಕಾರಣವಾಗುತ್ತದೆ ಮತ್ತು ಉದ್ದೇಶಿತ ಅಭಿವೃದ್ಧಿಪರ ಯೋಜನೆಗಳಿಗೆ ಹಣಕಾಸನ್ನು ಪೂರೈಸುವಲ್ಲಿ ತೊಂದರೆಯುಂಟಾಗುತ್ತದೆ. ದಿ:31-3-2023 ಕ್ಕೆ ಇದ್ದಂತೆ ಬ್ಯಾಂಕಿನ ಕೃಷಿ ಹಾಗೂ ಕೃಷಿಯೇತರ ಸಾಲ, ವಸೂಲಿ ಮತ್ತು ಬಾಕಿಗಳ ಕೆಳಗಿನಂತಿವೆ. (ರೂ. ಲಕ್ಷಗಳಲ್ಲಿ)

| ಅನ | ವಿವರ | ತಗಾದೆ | ವಸೂಲಿ | ಬಾಕಿ | 31-3-23 ಕ್ಕೆ ಇದ್ದಂತೆ% | 31-3-22 ಕ್ಕೆ ಇದ್ದಂತೆ% |
|---|---|---|---|---|---|---|
| | ಅ) ಕೃಷಿ ಸಾಲ: | | | | | |
| 1 | ಅಲ್ಪಾವಧಿ ಸಾಲ | 44382.00 | 41549.19 | 2832.81 | 93.62 | 90.93 |
| 2 | ಮಧ್ಯಮಾವಧಿ ಕೃಷಿ ಸಾಲ | 2065.64 | 2038.61 | 27.03 | 98.69 | 97.78 |
| 3 | ಮಧ್ಯಮಾವಧಿ ಪರಿವರ್ತಿತ | 44.74 | 1.76 | 42.98 | 3.93 | 3.70 |
| | **ಒಟ್ಟು** | **46492.38** | **43589.56** | **2902.82** | **93.76** | **91.12** |
| | ಬ) ಕೃಷಿಯೇತರ ಸಾಲ: | | | | | |
| 1 | ಎನ್.ಎಫ್.ಎಸ್.ಸಾಲ | 5762.39 | 5461.57 | 300.82 | 94.78 | 92.95 |
| 2 | ವಾಹನ ಖರೀದಿ ಸಾಲ | 712.62 | 650.58 | 62.04 | 91.29 | 94.75 |
| 3 | ಪಗಾರ ಆಧಾರಿತ ಸಾಲ | 4229.17 | 3874.16 | 355.01 | 91.61 | 94.02 |
| 4 | ಬಂಗಾರ ಆಭರಣ ಸಾಲ | 8938.07 | 8838.31 | 99.76 | 98.88 | 98.48 |
| | **ಒಟ್ಟು** | **19642.25** | **18824.62** | **817.63** | **95.84** | **95.82** |

**7) ಅಭಿವೃದ್ದಿ ಕ್ರಿಯಾ ಯೋಜನೆ :**

ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ನಬಾರ್ಡ ಯೋಜನೆಯಡಿ ಅಭಿವೃದ್ದಿ ಕ್ರಿಯಾ ಯೋಜನೆ ರೂಪಿಸಲಾಗಿದೆ. ಶೇರು, ಠೇವಣಾತಿ, ಸಾಲ ವಿತರಣೆ ಮತ್ತು ವಸೂಲಾತಿ, ಆಡಳಿತ ವೆಚ್ಚಗಳ ನಿಭಾವಣೆ, ಶಾಖೆಗಳ ಆರ್ಥಿಕ ಸಬಲತೆ ಇತ್ಯಾದಿ ವಿಷಯಗಳ ಬಗ್ಗೆ ನಿಯಮಿತವಾಗಿ ಆಡಳಿತ ಮಂಡಳಿ/ಉಪ ಸಮಿತಿ/ ಟಾಸ್ಕಫೋರ್ಸ ಸಮಿತಿ ಸಭೆಗಳಲ್ಲಿ ಪರಾಮರ್ಶೆ ನಡೆಸಲಾಗುತ್ತಿದೆ. ಸನ್ 2021-22 ಹಾಗೂ 2022-23ಕ್ಕೆ ಇದ್ದಂತೆ ವಿವರ. (ರೂ.ಲಕ್ಷಗಳಲ್ಲಿ)

| ಅ.ನ | ವಿವರ | 2021-22 | | 2022-23 | |
|---|---|---|---|---|---|
| | | ಗುರಿ | ಸಾಧನೆ | ಗುರಿ | ಸಾಧನೆ |
| 1 | ಶೇರು ಭಂಡವಾಳ | 6213.00 | 8108.32 | 8823.00 | 9517.30 |
| 2 | ನಿಧಿಗಳು | 4090.00 | 3984.05 | 3984.05 | 4509.90 |
| 3 | ಪಡೆದ ಸಾಲಗಳು | 25000.00 | 33145.40 | 35000.00 | 56757.09 |
| 4 | ಠೇವುಗಳು : | 74000.00 | 83187.23 | 100000.00 | 96365.87 |
| | ಅ)ವ್ಯಕ್ತಿದಾರರಿಂದ | 45192.00 | 47508.23 | 46000.00 | 38528.61 |
| | ಬ)ಸಂಘ/ಸಂಸ್ಥೆಗಳಿಂದ | 28808.00 | 35679.00 | 54000.00 | 57837.26 |
| 5 | ಗುಂತಾವಣೆಗಳು | 31000.00 | 33077.87 | 35000.00 | 44063.36 |
| 6 | ಸಾಲ ಹೊರ ಬಾಕಿ : | 77540.00 | 90831.75 | 115000.00 | 117978.17 |
| | ಅ) ಕೃಷಿ | 48040.00 | 59220.39 | 75000.00 | 77472.74 |
| | ಬ) ಕೃಷಿಯೇತರ | 29500.00 | 31611.36 | 40000.00 | 40505.43 |
| 7 | ಸಾಲ ಹಂಚಿಕೆ : | 80000.00 | 84988.74 | 114800.00 | 108637.37 |
| | ಅ) ಕೃಷಿ | 50000.00 | 53149.34 | 69800.00 | 70946.21 |
| | ಬ) ಕೃಷಿಯೇತರ | 30000.00 | 31839.40 | 45000.00 | 37691.16 |

**8) ಸ್ವ-ಸಹಾಯ ಗುಂಪುಗಳ ರಚನೆ ಮತ್ತು ಸಾಲ ನೀಡಿಕೆ:**

ನಬಾರ್ಡ ಮಾರ್ಗಸೂಚಿಗಳಡಿ ಬಡವರ್ಗದ ಜನರಲ್ಲಿ ಆರ್ಥಿಕ ಸ್ವಾವಲಂಬನೆ, ಉಳಿತಾಯ ಮನೋಭಾವನೆ. ಬ್ಯಾಂಕಿಂಗ್ ವ್ಯವಸ್ಥೆಯೊಂದಿಗೆ ವ್ಯವಹಾರ ಜೋಡಣೆ ಮಾಡುವ ನಿಟ್ಟಿನಲ್ಲಿ ಸ್ವ-ಸಹಾಯ ಗುಂಪುಗಳ ರಚನೆ, ಕಾರ್ಯಾನುಷ್ಟಾನ ಮತ್ತು ಸಾಲ ಸೌಲಭ್ಯ ನೀಡಲಾಗುತ್ತಿದೆ. 31 ಮಾರ್ಚ-2023 ಕ್ಕೆ 15811 ಸ್ವ-ಸಹಾಯ ಗುಂಪುಗಳನ್ನು ರಚಿಸಿದ್ದು, ರೂ.1754.31 ಲಕ್ಷ ಉಳಿತಾಯ ಸಂಗ್ರಹಿಸಲಾಗಿದೆ. 8263 ಸ್ವ-ಸಹಾಯ ಗುಂಪುಗಳಿಗೆ ರೂ.14486.24 ಲಕ್ಷ ಸಾಲ ನೀಡಲಾಗಿದೆ. ವಸೂಲಾತಿ ಪ್ರಮಾಣ ಶೇ.91.13 ರಷ್ಟಿದೆ.

2519 ಜಂಟಿ ಬಾಧ್ಯತಾ ಗುಂಪುಗಳ ರಚನೆಯಾಗಿದ್ದು,1481 ಗುಂಪುಗಳಿಗೆ ರೂ.2546.63 ಲಕ್ಷ ಸಾಲ ನೀಡಲಾಗಿದೆ. 600 ಜಂಟಿ ಬಾಧ್ಯತಾ ಗುಂಪುಗಳನ್ನು ರಚಿಸಲು ನಬಾರ್ಡನ ಅನುಮೋದನೆ ಪಡೆಯಲಾಗಿದೆ.

**2) ಕಿಸಾನ್ ಕ್ರೆಡಿಟ್ ಕಾರ್ಡ(ರೂಪೇ ಕಾರ್ಡ) ಯೋಜನೆ :**

ಕೇಂದ್ರ ಪುರಸ್ಕೃತ ಯೋಜನೆಯಡಿ ಪಾರದರ್ಶಕತೆ ಕಾಪಾಡುವ ನಿಟ್ಟಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮಟ್ಟದಲ್ಲಿ ರೈತ ಸದಸ್ಯರ ಅನುಕೂಲಕ್ಕಾಗಿ ಕಿಸಾನ್ ಕ್ರೆಡಿಟ್ ಯೋಜನೆ ಜಾರಿಗೊಳಿಸಲಾಗಿದೆ. ವರದಿ ವರ್ಷದಲ್ಲಿ 103651 ಸಾಲ ಪಡೆದ ರೈತ ಸದಸ್ಯರಿಗೆ ಕಿಸಾನ್ ಕ್ರೆಡಿಟ್ ಕಾರ್ಡು (ರೂಪೇ ಕಾರ್ಡ) ಗಳನ್ನು ವಿತರಿಸಲಾಗಿದೆ. ಸಂಘದ ರೈತ ಸದಸ್ಯರು ಸದರಿ ಕಾರ್ಡುಗಳ ಮೂಲಕ ವ್ಯವಹಾರ ಮಾಡುವಂತೆ ನೋಡಿಕೊಳ್ಳಲು ವಿನಂತಿಸಲಾಗಿದೆ.

**3) ಕೆ.ಸಿ.ಸಿ.ಸಾಲಗಾರರಿಗೆ ವೈಯಕ್ತಿಕ ಅಪಘಾತ ವಿಮೆ : ( Personal Accidental Insurance Schme )**

ಬ್ಯಾಂಕಿನ ಕಾರ್ಯವ್ಯಾಪ್ತಿಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಬೆಳೆಸಾಲ ಪಡೆದ ರೈತ ಸದಸ್ಯರಿಗೆ ನಬಾರ್ಡ ಸುತ್ತೋಲೆ ಕ್ರ: N:B:P:C:D.17-01-02 ದಿ:14-6-2001 ರ ಪ್ರಕಾರ ವೈಯಕ್ತಿಕ ಅಪಘಾತ ವಿಮಾ ಯೋಜನೆ (Personal Accidental Insurance Schme) ಜಾರಿಗೊಳಿಸಲಾಗಿದೆ. ಸದರೀ ಯೋಜನೆಯಡಿ ಪ್ರತೀ ಸಾಲಗಾರ ಸದಸ್ಯರಿಗೆ ರೂ.15/-ರಂತೆ ಪ್ರಿಮಿಯಂನ್ನು ವಿಮಾ ಕಂಪನಿಗೆ ನಿಗದಿಪಡಿಸಿದ ಅವಧಿಯೊಳಗೆ ಪಾವತಿಸಬೇಕಿರುತ್ತದೆ.

**4) ಬೆಳೆವಿಮಾ ಯೋಜನೆ (Crop Insurance Scheme) :**

ರಾಜ್ಯ ಮತ್ತು ಕೇಂದ್ರ ಸರಕಾರಗಳ ನೀತಿಯಂತೆ ನಿಗದಿಪಡಿಸಿದ ಬೆಳೆಗಳಿಗೆ ವಿಮಾ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಈ ಕುರಿತು ಪರಿಪತ್ರದ ಮೂಲಕ ಬ್ಯಾಂಕಿನ ಶಾಖೆ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ತಿಳುವಳಿಕೆ ನೀಡಲಾಗಿದೆ.

# ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ ಲಿ.,ಧಾರವಾಡ

## -: ಅ ಭಿ ನ ಂ ದ ನೆ ಗ ಳು :-

ಕರ್ನಾಟಕ ರಾಜ್ಯದ ರೈತರ ಸಂಕಷ್ಟಕ್ಕೆ ಸ್ಪಂಧಿಸಿ ಶೂನ್ಯ ಬಡ್ಡಿದರದಲ್ಲಿ ಕೃಷಿಸಾಲ, ಕಾಯಕ ಯೋಜನೆಗಳನ್ನು ಜಾರಿಗೊಳಿಸಿರುವುದಕ್ಕಾಗಿ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ. ಎಸ್. ಬೊಮ್ಮಾಯಿಯವರಿಗೆ ಹಾಗೂ ಹಾಲಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ ರವರಿಗೆ, ಮತ್ತು ರಾಜ್ಯದ ಸಹಕಾರ ಸಚಿವರಾದ ಸನ್ಮಾನ್ಯ ಶ್ರೀ ಕೆ. ಎನ್. ರಾಜಣ್ಣ ರವರಿಗೆ ಹಾಗೂ ಸರ್ಕಾರದ ಸಮಸ್ತ ಸಚಿವ ಸಂಪುಟದ ಸಚಿವರುಗಳಿಗೆ, ಶಾಸಕರುಗಳಿಗೆ, ಸಂಸದರಿಗೆ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬ್ಯಾ0ಕಿನ ಅಭಿವೃದ್ಧಿಗೆ ಸಲಹೆ, ಸೂಚನೆ, ಸಹಾಯ, ಸಹಕಾರ ಮತ್ತು ಮಾರ್ಗದರ್ಶನ ಮಾಡುತ್ತಾ ಬರುತ್ತಿರುವ ಸಹಕಾರ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳಿಗೆ, ಸಹಕಾರ ಸಂಘಗಳ ನಿಬಂಧಕರಿಗೆ ಮತ್ತು ಬೆಳಗಾವ ಪ್ರಾಂತೀಯ ಸಂಯುಕ್ತ ನಿಬಂಧಕರಿಗೆ ಹಾಗೂ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳ ಉಪ ನಿಬಂಧಕರಿಗೆ, ಸಹಾಯಕ ನಿಬಂಧಕರುಗಳಿಗೆ, ಸಹಕಾರ ಅಭಿವೃದ್ಧಿ ಅಧಿಕಾರಿಗಳಿಗೆ, ಸನ್ 2022-23ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನೆ ಜರುಗಿಸಿದ ಮೆ:ಪಿ. ಎಂ. ಆನಂದ ಮತ್ತು ಕಂಪನಿ, ಚಾರ್ಟರ್ಡ ಅಕೌಂಟಂಟರು, ಬೆಂಗಳೂರು ಇವರಿಗೆ, ಆಂತರಿಕ ಲೆಕ್ಕಪರಿಶೋಧನೆ ನಡೆಸಿದ ಶ್ರೀ ಚೆನ್ನಿ ಮತ್ತು ಕಂಪನಿ, ಸಿಎ, ಹುಬ್ಬಳ್ಳಿ ಇವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಬ್ಯಾಂಕಿಗೆ ಆರ್ಥಿಕ ಪುನರ್ಧನ ಸೌಲಭ್ಯ ನೀಡುತ್ತಾ ಸಲಹೆ, ಸೂಚನೆ, ಮಾರ್ಗದರ್ಶನ ಮಾಡುತ್ತಲಿರುವ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ ಬ್ಯಾಂಕಿನ ಅಧ್ಯಕ್ಷರಾದ ಮಾನ್ಯಶ್ರೀ ಬೆಳ್ಳಿ ಪ್ರಕಾಶರವರಿಗೆ ಹಾಗೂ ಬ್ಯಾಂಕಿನ ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಹಾಗೂ ಅಧಿಕಾರಿ ವರ್ಗದವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಬ್ಯಾಂಕಿಗೆ ಪುನರ್ಧನ ಆರ್ಥಿಕ ಸಾಲ ಸೌಲಭ್ಯಗಳನ್ನು ನೀಡುತ್ತಾ, ಬ್ಯಾಂಕಿನ ಪ್ರಗತಿಗೆ ಸಲಹೆ, ಸೂಚನೆ, ಮಾರ್ಗದರ್ಶನ ನೀಡುತ್ತಾ ಬರುತ್ತಿರುವ ನಬಾರ್ಡನ ಚೇರಮನರಿಗೆ, ಬೆಂಗಳೂರು ಪ್ರಾದೇಶಿಕ ಕಚೇರಿಯ ಚೀಫ್ ಜನರಲ್ ಮ್ಯಾನೇಜರವರಿಗೆ ಮತ್ತು ಅಧಿಕಾರಿವರ್ಗದವರಿಗೆ ಮತ್ತು ಡಿಡಿಎಂ, ನಬಾರ್ಡ,ಧಾರವಾಡ, ಗದಗ, ಹಾವೇರಿ ಜಿಲ್ಲೆ ಇವರುಗಳಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಬ್ಯಾಂಕಿನ ಮೇಲೆ ವಿಶ್ವಾಸ ಹೊಂದಿ ತಮ್ಮ ಆರ್ಥಿಕ ವ್ಯವಹಾರಗಳನ್ನು ನಡೆಸುತ್ತಾ ಬರುತ್ತಿರುವ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿನ ಅರ್ಬನ್ ಸಹಕಾರ ಬ್ಯಾಂಕುಗಳಿಗೆ, ವಿವಿಧ ಪತ್ತಿನ ಸಹಕಾರ ಸಂಘಗಳಿಗೆ, ಸೌಹಾರ್ದ ಸಹಕಾರ ಸಂಘಗಳಿಗೆ, ತಾಲೂಕಾ ಕೃಷಿ ಉತ್ಪನ್ನ ಮಾರಾಟ ಸಂಘಗಳಿಗೆ, ಎ.ಪಿ.ಎಂ.ಸಿ.ಗಳಿಗೆ ಹೃದಯಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಬ್ಯಾಂಕಿನ ಆಧಾರಸ್ತಂಭಗಳಾಗಿ ಬ್ಯಾಂಕಿನ ಸೌಲಭ್ಯಗಳನ್ನು ರೈತ ಸದಸ್ಯರುಗಳಿಗೆ ತಲುಪಿಸುವ ಮೂಲಕ ಸಾರ್ಥಕ ಸೇವೆಯಲ್ಲಿ ನಿರತವಾಗಿರುವ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಹೃದಯಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಬ್ಯಾಂಕಿನ ಪ್ರಗತಿ ಕುರಿತಂತೆ ಜಿಲ್ಲಾ ಮಟ್ಟದ ಸಭೆಗಳಲ್ಲಿ, ಬ್ಯಾಂಕರ್ಸ ಸಭೆಗಳಲ್ಲಿ ಉಪಯುಕ್ತ ಸಲಹೆ ಸೂಚನೆ, ಮಾರ್ಗದರ್ಶನ ನೀಡುತ್ತಾ ಬರುತ್ತಿರುವ ಧಾರವಾಡ, ಗದಗ, ಹಾವೇರಿ ಜಿಲ್ಲೆಗಳ ಮಾನ್ಯ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ, ಲೀಡ್ ಬ್ಯಾಂಕ್ ಅಧಿಕಾರಿಗಳಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಬ್ಯಾಂಕಿನ ಆಡಳಿತ ಮ0ಡಳಿ ಪರವಾಗಿ

ಸಹಿ/-

**ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿ,**

ಅಧ್ಯಕ್ಷರು

ಕೆ.ಸಿ.ಸಿ.ಬ್ಯಾ0ಕ ಲಿ.,ಧಾರವಾಡ.

**ವಿಷಯ-4 :**

**ಸನ್ 2022-23 ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಸಲ್ಲಿಸಿದ ಅನುಪಾಲನಾ ವರದಿಯನ್ನು ಪರಿಶೀಲಿಸಿ ಮ0ಜೂರಿ ನೀಡುವ ಬಗ್ಗೆ.**

**ಟಿಪ್ಪಣೆ :**

ಸನ್ 2022-23 ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿಯನ್ನು ಆಡಳಿತ ಮಂಡಳಿ ಸಭೆಯ ಶಿಫಾರಸ್ಸಿನೊಂದಿಗೆ ವಾರ್ಷಿಕ ಮಹಾಸಭೆಯ ಮ0ಜೂರಿಗಾಗಿ ಸಲ್ಲಿಸಿದೆ.

**ವಿಷಯ-5:**

**ವಿಚಾರಣಾ ವರದಿಗಳಿದ್ದಲ್ಲಿ ಪರಿಶೀಲಿಸುವ ಬಗ್ಗೆ.**

**ಟಿಪ್ಪಣೆ:**

ವರದಿ ಸಾಲಿನಲ್ಲಿ ಯಾವುದೇ ವಿಚಾರಣಾ ವರದಿಗಳಿರುವದಿಲ್ಲ.

**ವಿಷಯ-6:**

**ಸನ್ 2022-23ನೇ ಸಾಲಿನ ಲೆಕ್ಕ ಪರಿಶೋಧಿತ ಜಮಾ-ಖರ್ಚು, ಲಾಭ-ಹಾನಿ, ಅಢಾವೆ ಹಾಗೂ ಇತರೆ ಪತ್ರಿಕೆಗಳನ್ನು ಪರಿಶೀಲಿಸುವ ಬಗ್ಗೆ.**

**ಟಿಪ್ಪಣೆ :**

ಸನ್ 2022-23ನೇ ಸಾಲಿನ ಲೆಕ್ಕ ಪರಿಶೋಧಿತ ಜಮಾ-ಖರ್ಚು, ಲಾಭ-ಹಾನಿ, ಅಢಾವೆ ಹಾಗೂ ಇತರೆ ಪತ್ರಿಕೆಗಳನ್ನು ಸಭೆಯ ಪರಿಶೀಲನೆಗಾಗಿ ಸಲ್ಲಿಸಿದೆ.

**ವಿಷಯ-7:**

**ನಿವ್ವಳ ಲಾಭಾಂಶ ವಿಲೆವಾರಿ ಬಗ್ಗೆ.**

**ಟಿಪ್ಪಣೆ :**

ಸನ್ 2022-23 ನೇ ಸಾಲಿಗೆ ಬ್ಯಾಂಕು ನಿವ್ವಳ ಲಾಭ ರೂ.51070353.17 ಗಳಿಸಿದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಹಾಗೂ ಬ್ಯಾಂಕಿನ ಉಪನಿಯಮಗಳನುಸಾರ ಲಾಭ ವಿಭಾಗಣೆಗೆ ಅನುಮೋದನೆಗೆ ಸಲ್ಲಿಸಿದೆ.

| ಅ.ನಂ | ಪೋಟ ನಿಯಮ | ವಿವರ | ಪ್ರತಿಶತ | ಹಣ |
|---|---|---|---|---|
| 1 | | 2022-23 ನೇ ಸಾಲಿಗೆ ನಿವ್ವಳ ಲಾಭ | | 51070353.17 |
| 2 | 43 (1) | ಕಾಯ್ದಿಟ್ಟ ನಿಧಿಗೆ | 25 | 12767588.29 |
| | | ಬಾಕಿ ಉಳಿದಿದ್ದು | | 38302764.88 |
| 3 | 43 (2) | ಸಹಕಾರಿ ಶಿಕ್ಷಣ ನಿಧಿಗೆ | 2 | 766055.30 |
| 4 | 43 (3) | ಸಹಕಾರ ಕಲ್ಯಾಣ ನಿಧಿಗೆ | 5 | 2553517.66 |
| 5 | 43 (4) | ಕೃಷಿ ಪತ್ತಿನ ಸ್ಥಿರಿಕರಣ ನಿಧಿಗೆ (Agriculture stabilisation fee) | 15 | 7660552.98 |
| | | ಬಾಕಿ ಉಳಿದದ್ದು | | 27322638.95 |
| 6 | 43 (6) (1) | ಮುಳುಗುವ ಸಂಶಯಾತ್ಮಕ ಸಾಲದ ನಿಧಿಗೆ | 10 | 2732263.89 |
| 7 | 43 (6) (2) | ಗುಂತಾವಣೆ ಸವಕಳಿ ನಿಧಿ | 5 | 1366131.95 |
| 8 | 43 (6) (3) | ಕಟ್ಟಡ ನಿಧಿ | 10 | 2732263.89 |
| 9 | | ಬಾಕಿ ಉಳಿದ ರಕಂ ಕಟ್ಟಡ ನಿಧಿಗೆ | | 1940990.97 |
| 10 | 43 (6) (4) | ಡಿವಿಟೆಂಡ್ ಇಕ್ವೈಲೈಜೇಶನ್ ನಿಧಿ | 5 | 1366131.95 |
| 11 | 43(6)(9) | ಸಿಬ್ಬಂದಿ ಕ್ಷೇಮಾಭಿವೃದ್ಧಿ ನಿಧಿ | 5 | 1366131.95 |
| 12 | 43(6) (10) | ರೈತರ ಕ್ಷೇಮಾಭಿವೃದ್ಧಿ ನಿಧಿ | 5 | 1366131.95 |
| 13 | | ವಾಹನ ನಿಧಿ | | --- |
| 14 | | ದೇಣಿಗೆ | 1 | 273226.39 |
| 15 | 43(6)(7) | ಡಿವ್ಹಿಡೆಂಡ್ 2% | | 14179366.00 |
| | | **ಒಟ್ಟು** | | **51070353.17** |

**ವಿಷಯ-8:**

**ವ್ಯವಹಾರ ನಿರ್ವಹಣಾ ಕೊರತೆಗಳೆನಾದರೂ ಇದ್ದಲ್ಲಿ ಅವಲೋಕಿಸುವುದು ಮತ್ತು ಅ0ತಹ ಕೊರತೆಗಳನ್ನು ಕಡಿಮೆಗೊಳಿಸುವ ಕಾರ್ಯಕ್ರಮ ಹಾಕಿಕೊಳ್ಳುವ ಬಗ್ಗೆ.**

**ಟಿಪ್ಪಣಿ:**

ಬ್ಯಾಂಕಿನ ಕಾರ್ಯ ವ್ಯಾಪ್ತಿಯ ರೈತ ಸದಸ್ಯರಿಂದ ಹೆಚ್ಚುವರಿ ಸಾಲಕ್ಕೆ ಹಾಗೂ ಹೊಸ ಸದಸ್ಯರಿಗೆ ಬೆಳೆಸಾಲ ನೀಡುವಂತೆ ಹೆಚ್ಚಿನ ಬೇಡಿಕೆಗಳು ಬರುತ್ತಿದ್ದು ನಬಾರ್ಡ ಪುನರ್ಧನ ಮಿತಿಯಲ್ಲಿ ಕಡಿತಗೊಳಿಸುತ್ತಾ ಬಂದಿರುವುದರಿಂದ ಬೇಡಿಕೆ ಪೂರೈಸಲು ಸಾಧ್ಯವಾಗುತ್ತಿಲ್ಲ. ಆಡಳಿತ ಮಂಡಳಿ ಸಭೆಯಲ್ಲಿ ಸಂಪನ್ಮೂಲ ಕ್ರೂಢೀಕರಿಸಿ ಹೆಚ್ಚುವರಿ ಸಾಲ ನೀಡಿಕೆಗೆ ಕ್ರಮವಿಡಲಾಗಿದೆ. ಬ್ಯಾಂಕಿನ ಕೃಷಿ ಸಾಲ ನೀಡಿಕೆಯಲ್ಲಿ ಪ್ರಾ.ಕೃ.ಪ.ಸ.ಸಂಘಗಳ ಹಣಕಾಸಿನ ಭಾಗವಹಿಸುವಿಕೆ ಬಹಳಷ್ಟು ಸಂಘಗಳಲ್ಲಿ ಇರದೇ ಇರುವುದರಿಂದ ಹಾಗೂ ಕೆಸಿಸಿ ಬ್ಯಾಂಕು ಕೂಡಾ ಕೃಷಿ ಸಾಲ ನೀಡಿಕೆಯಲ್ಲಿ ಸಾಕಷ್ಟು ಬಂಢವಾಳ ಹೊಂದದೇ ಇರುವುದರಿಂದ ಸಂಘಗಳಲ್ಲಿಯೇ ರೈತ ಸದಸ್ಯರಿಗೆ ಸ್ಕೇಲ್ ಆಫ್ ಫೈನಾನ್ಸ , ಭೂಹಿಡುವಳಿ ಪ್ರಕಾರ ಸಾಲ ನೀಡಿಕೆ ಸಾಧ್ಯವಾಗುತ್ತಿಲ್ಲ. ಈ ದಿಶೆಯಲ್ಲಿ ಪ್ರಾ.ಕೃ.ಪ.ಸ. ಸಂಘಗಳ ಹಣಕಾಸಿನ ಭಾಗವಹಿಸುವಿಕೆಯು ಪ್ರಮುಖವಾಗಿರುವುದರಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ರೈತ ಹೊಸ ಸದಸ್ಯರಿಗೆ ಸಾಲ ನೀಡುವ ಹಾಗೂ ಹಾಲಿ ಸಾಲಗಾರ ಸದಸ್ಯರಿಗೆ ಸಾಲ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಆರ್ಥಿಕ ಸಂಪನ್ಮೂಲಗಳನ್ನು ಕ್ರೂಢೀಕರಿಸುವ ಸಂಘಗಳು ಬ್ಯಾಂಕಿನಲ್ಲಿ ಇಡುವ ಠೇವು ಮೊತ್ತದಷ್ಟೇ ಬ್ಯಾಂಕಿನ ಮೊತ್ತ ಸೇರ್ಪಡೆ ಮಾಡಿ ಕೃಷಿಸಾಲ ನೀಡಲು ಆಡಳಿತ ಮಂಡಳಿ ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಪ್ರಾ.ಕೃ.ಪ.ಸ. ಸಂಘಗಳು ವಿಶೇಷ ಆಸಕ್ತಿ ವಹಿಸಿ ಬ್ಯಾಂಕಿನ ಆರ್ಥಿಕ ಸಂಪನ್ಮೂಲ ಕ್ರೂಢೀಕರಣಕ್ಕೆ ಮತ್ತು ರೈತ ಸದಸ್ಯರಿಗೆ ಹೆಚ್ಚುವರಿ/ಹೊಸ ಕೃಷಿ ಸಾಲ ವಿತರಿಸಲು ಸಹಾಯ ಮಾಡಲು ವಿನಂತಿಸಲಾಗಿದೆ.

**ವಿಷಯ-9:**

**ಸನ್ 2023-24ನೇ ಸಾಲಿನ ಬ್ಯಾಂಕಿನ ಕಾರ್ಯಚಟುವಟಿಕೆಗಳ ಕಾರ್ಯಕ್ರಮದ ಅನುಮೋದನೆ ನೀಡುವ ಕುರಿತು.**

**ಟಿಪ್ಪಣಿ:**

ಸನ್ 2023-24 ನೇ ಸಾಲಿಗೆ ಹಾಕಿಕೊಳ್ಳಲಾದ ಈ ಕೆಳಕಂಡ ಬ್ಯಾಂಕಿನ ಕಾರ್ಯಚಟುವಟಿಕೆಗಳ ಕಾರ್ಯಕ್ರಮದ ಅನುಮೋದನೆಗಾಗಿ ಸಲ್ಲಿಸಿದೆ.

- ನಬಾರ್ಡ ಪುನರ್ಧನ ಯೋಜನೆಯಡಿ ಮಾಧ್ಯಮಿಕ ಕೃಷಿಸಾಲ ಯೋಜನೆಗಳಡಿ ವಿವಿಧ ಸಾಲ ಸೌಲಭ್ಯಗಳನ್ನು ರೈತ ಸದಸ್ಯರುಗಳಿಗೆ ಒದಗಿಸುವುದು
- ಪ್ರಸಕ್ತ ಸಾಲಿನಲ್ಲಿ ಶೇರು ಬಂಢವಾಳ ರೂ.109 ಕೋಟಿಗೆ ಮತ್ತು ಠೇವಣಾತಿ ರೂ.1160 ಕೋಟಿಗಳಿಗೆ, ಕೃಷಿ ಸಾಲ ವಿತರಣೆ ರೂ.725 ಕೋಟಿಗೆ ಮತ್ತು ಕೃಷಿಯೇತರ ಸಾಲ ವಿತರಣೆ ರೂ.500 ಕೋಟಿಗಳಿಗೆ ಗುರಿ ಹಾಕಿಕೊಳ್ಳಲಾಗಿದೆ.
- ಪ್ರಸಕ್ತ ಸಾಲಿನಲ್ಲಿ 10 ಫ್ಯಾಕ್ಸ ಗಳನ್ನು ಬಹುಸೇವಾ ಕೇಂದ್ರಗಳನ್ನಾಗಿ ಮಾಡುವ (PACS as MSC) ಯೋಜನೆ ಹಾಕಿಕೊಳ್ಳಲಾಗಿದೆ.
- ಆರ್‌ಬಿಐಯ್ / ನಬಾರ್ಡ ನಿರ್ದೇಶನದಂತೆ ಎಲ್ಲ ರೈತ ಸದಸ್ಯರಿಗೆ ಕೆಸಿಸಿ ರೂಪೆಕಾರ್ಡ್ ನೀಡುವುದು.
- ಕೇಂದ್ರ ಮತ್ತು ರಾಜ್ಯ ಸರ್ಕಾರ/ನಬಾರ್ಡ/ಅಪೆಕ್ಸ್ ಬ್ಯಾಂಕ ನೀತಿಗಳನುಸಾರ ಫ್ಯಾಕ್ಸ ಗಳ ಸಬಲೀಕರಣಕ್ಕೆ 'ಸಹಕಾರದ ಮೂಲಕ ಸಮೃದ್ಧಿ' ಧ್ಯೇಯದಡಿ ನೀಡಲಾದ ಉಪಕ್ರಮಗಳನ್ನು ಕೈಗೊಳ್ಳುವುದು ಅಗತ್ಯ ಸೌಲಭ್ಯಗಳನ್ನು ಒದಗಿಸುವುದು.
- ಗ್ರಾಹಕರಿಗೆ ಪ್ರಧಾನಮಂತ್ರಿ ಜೀವನ ಜ್ಯೋತಿ ವಿಮಾ (PMJJY) ಹಾಗೂ ಪ್ರಧಾನ ಮಂತ್ರಿ ಜೀವನ ಸುರಕ್ಷಾ ವಿಮಾ (PMSBY) ಯೋಜನೆ ಸೌಲಭ್ಯ ಕಲ್ಪಿಸುವುದು.
- ಗ್ರಾಹಕರಿಗೆ ಇಂಟರನೆಟ್ ಬ್ಯಾಂಕಿಂಗ್ ಹಾಗೂ ಯುಪಿಐ ಸೇವೆ ಜಾರಿಗೊಳಿಸುವುದು.
- ಜನರ ಬೇಡಿಕೆ ಹಾಗೂ ವ್ಯವಹಾರಕ್ಕೆ ಪೂರಕವಾದ ಸ್ಥಳಗಳಲ್ಲಿ ಬ್ಯಾಂಕಿನ ಹೊಸ ಶಾಖೆ ತೆರೆಯುವುದು.
- ನಬಾರ್ಡ ನಿರ್ದೇಶಿತ ಆರ್ಥಿಕ ಸಾಕ್ಷರತಾ ಕಾರ್ಯಕ್ರಮ ಜರುಗಿಸುವುದು, ಜಂಟೀ ಬಾಧ್ಯತಾ ಗುಂಪುಗಳನ್ನು ರಚಿಸುವುದು.
- ಬ್ಯಾಂಕಿನ ಸೌಲಭ್ಯಗಳ ಬಗ್ಗೆ ಜನತೆಗೆ ತಿಳುವಳಿಕೆ ಮೂಡಿಸಲು ಪ್ರಚಾರ ಕ್ರಮಗಳನ್ನು ಕೈಗೊಳ್ಳುವುದು.

- ಫ್ಯಾಕ್ಸ್ ಆಡಳಿತ ಮಂಡಳಿ ಸದಸ್ಯರಿಗೆ/ಸಿಬ್ಬಂದಿಗೆ ಅವಶ್ಯಕ ತರಬೇತಿ ಕೊಡಿಸುವುದು.

**ವಿಷಯ-10:**

**ಅ) ಸನ್ 2022-23 ನೇ ಸಾಲಿನ ಸ್ವೀಕೃತ ಅ0ದಾಜು ವೆಚ್ಚಕ್ಕಿ0ತ ವಿವಿಧ ಕಲ0ಗಳ ಮೇಲೆ ಹೆಚ್ಚಿಗೆ ಖರ್ಚು ಆಗಿದ್ದನ್ನು ಮ0ಜೂರಿ ನೀಡುವ ಕುರಿತು.**

**ಟಿಪ್ಪಣಿ :**

ಸನ್ 2022-23 ನೇ ಸಾಲಿನಲ್ಲಿ ವಿವಿಧ ಕಲಂಗಳ ಮೇಲೆ ಸ್ವೀಕೃತ ಅಂದಾಜು ವೆಚ್ಚಕ್ಕಿಂತ ಹೆಚ್ಚಿಗೆ ಖರ್ಚು ಆಗಿದ್ದರ ತಪಶೀಲನ್ನು ಸವಿವರಗಳೊಂದಿಗೆ ಈ ಕೆಳಗಿನಂತೆ ಸಲ್ಲಿಸಿದೆ.

| | ಖರ್ಚಿನ ಬಾಬುಗಳ ವಿವರ | ಮಂಜೂರಾದ ಅಂದಾಜು ವೆಚ್ಚ | ಈ ಪೈಕಿ ಖರ್ಚಾಗಿ ದ್ದು | ಹೆಚ್ಚುವರಿ ಖರ್ಚು | ಕಾರಣಗಳು |
|---|---|---|---|---|---|
| 1) | ಠೇವುಗಳ ಮೇಲಿನ ಬಡ್ಡಿ | 3600.00 | 3763.41 | -163.41 | ಹೆಚ್ಚಿನ ವೆಚ್ಚದ ಠೇವಣಿ ಮೇಲೆ ಬಡ್ಡಿ ಪಾವತಿಸಿದ್ದು (ರೂ.117.21ಕೋಟಿ ಹೆಚ್ಚಿಗೆಯಾಗಿರುತ್ತದೆ.) ಹಾಗೂ ಠೇವಣಿಗಳ ಮೇಲಿನ ಬಡ್ಡಿಯನ್ನು ಹೆಚ್ಚಿಗೆ ಮಾಡಲಾಗಿರುತ್ತದೆ |
| 2) | ಸಾಲಗಳ ಮೇಲಿನ ಬಡ್ಡಿ | 1500.00 | 1873.16 | -373.16 | ನಬಾರ್ಡ /ಅಪೆಕ್ಸ ಬ್ಯಾಂಕಿನಿಂದ ಹೆಚ್ಚುವರಿ ಮೊತ್ತದ ಮಾಧ್ಯಮಿಕ ಸಾಲದ ಮೇಲಿನ ಬಡ್ಡಿ ಪಾವತಿಸಿದ್ದರಿಂದ. |
| 3) | ಸಂಬಳ ಭತ್ತೆ ವ ಇತರೆ | 2800.00 | 2782.28 | 17.72 | |
| 4) | ಭಾಡಿಗೆ ಕರ ವಿಮೆ ವಗೈರೆ | 175.00 | 204.94 | -29.94 | ಬಾಕಿ ಇರುವ ಸ್ವಂತ ಕಟ್ಟಡಗಳ ಆಸ್ತಿ ಕರ ಪಾವತಿಸಿದ್ದು. |
| 5) | ಸಲಹೆಗಾರರ/ಪ್ರೇರಕರ/ ಇತರೆ ಗೌರವಧನ | 30.00 | 36.39 | -6.39 | ಪ್ರೇರಕರ, ಕಾನೂನು ಸಲಹೆಗಾರರ ಫೀ ಸಿಪಾಯಿ ಸಿಬ್ಬಂದಿಗಳ ನೇಮಕಾತಿಗೆ ಮೊದಲು ಇದ್ದ ದಿನಗೂಲಿ ಕೆಲಸಗಾರರ ಗೌರವಧನ ಪಾವತಿಸಿರುವುದು. |
| 6) | ಕಟ್ಟಡ ನಿರ್ವಹಣೆ/ ಹೊಸ ಕಟ್ಟಡ ನಿರ್ಮಾಣದ ವೆಚ್ಚ | 0.00 | | 0.00 | |
| 7) | ಟಿ.ಸಿ.ಎಸ್. ಕಂಪನಿ ಭಾಡಿಗೆ/ ನಿರ್ವಹಣೆ ವೆಚ್ಚ | 125.00 | 134.23 | -9.23 | ಟಿ.ಸಿ.ಎಸ್. ಕಂಪನಿ ಭಾಡಿಗೆ ಹೆಚ್ಚಳ ಮಾಡಿದ್ದರಿಂದ |
| 8) | ಟಪಾಲ, ಫೋನ | 15.00 | 10.62 | 4.38 | |
| 9) | ಲೆಕ್ಕ ಪರಿಶೋಧಕರ ವೆಚ್ಚ | 25.00 | 24.02 | 0.98 | |
| 10) | ಪ್ರಿಂಟಿಂಗ, ಸ್ಟೇಶನರಿ, ಜಾಹಿರಾತು | 55.00 | 18.84 | 36.16 | |
| 11) | ವಾಹನಗಳ ವೆಚ್ಚ | 25.00 | 18.08 | 6.92 | |
| 12) | ಆದಾಯ ಕರ | 50.00 | 0.00 | 50.00 | |
| | | 60.99 | | | ಇತರೆ ಬೇರೆ ಬ್ಯಾಂಕುಗಳ ಮೂಲಕ ಎಟಿಎಂ ಕಾರ್ಡ ಅಪರೇಟಿಂಗ ಚಾರ್ಜಸ್ ಅಪೆಕ್ಸ ಬ್ಯಾಂಕಿಗೆ ಪಾವತಿಸಿದ್ದು |
| 13) | ಉತ್ತಮ ಸಾಲಗಳ ಮೇಲಿನ ಅನುವು | 100.00 | -100.00 | | ಶಾಸನಬದ್ಧವಾಗಿ ಉತ್ತಮ ಸಾಲಗಳ ಮೇಲೆ ಮುಂಜಾಗ್ರತೆಯಾಗಿ ಅನುವು ಮಾಡಿರುತ್ತದೆ |
| 14) | ಇತರೆ | 360.00 | | | |
| | ಅ) ಪೀಠೋಪಕರಣ ವಾಹನಗಳ ಸವಕಳಿ | 75.00 | 67.96 | 7.04 | |

| | | | | |
|---|---|---|---|---|
| ಇ) ದೇಣಿಗೆ | 4.00 | 0.00 | 4.00 | |
| ಈ) ನಿರ್ದೇಶಕರ ಭತ್ತೆ | 15.00 | 10.02 | 4.98 | |
| ಉ) ಸೇವಾತೆರಿಗೆ | 10.00 | 8.43 | 1.57 | |
| ಊ) ತರಬೇತಿ ವೆಚ್ಚ | 30.00 | 1.11 | 28.89 | |
| ಋ) ಸಭೆ ಸಮಾರಂಭದಲ್ಲಿ ಅತಿಥಿ ಸತ್ಕಾರ | 6.00 | 5.78 | 0.22 | |
| ಎ) ಲೀಗಲ್ ಫೀ | 5.00 | 2.29 | 2.71 | |
| ಏ) ಕಮೀಷನ್ | 0.00 | 1.82 | -1.82 | ನೆಫ್ಟ, ಆರ್‌ಟಿಜಿಎಸ್, ಎಟಿಎಂ ಚಾರ್ಜಸ್ ಅಪೆಕ್ಸ ಬ್ಯಾಂಕಿಗೆ ಪಾವತಿಸಿದ್ದು |
| ಐ) ಇತರೆ (ತರಬೇತಿ ವೆಚ್ಚ ಸಭೆ-ಸಮಾರಂಭದಲ್ಲಿ ಅತಿಥಿಸತ್ಕಾರ ಕಲಂಗಳನ್ನು ಹೊರತು ಪಡಿಸಿ) | 95.00 | 114.89 | -19.89 | ವರದಿ ಸಾಲಿನಲ್ಲಿ ಗದಗ, ಬ್ಯಾಡಗಿ, ಹಿರೇಕೆರೂರ, ರಾಣೆಬೆನ್ನೂರ ಮತ್ತು ನವಲಗುಂದ ಶಾಖೆಗಳ ರಿಪೇರಿ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ. |
| ಒ) ಮುಳುಗುವ ಸಂಶಯಾತ್ಮಕ ಅನುವು (bad debt provision) | 0.00 | 233.00 | -233.00 | ಗ್ರಾಮೀಣ ಭಾಗದಲ್ಲಿರುವ ಶಾಖೆಗಳ ಆದಾಯ ತೆರಿಗೆಯಲ್ಲಿ ರಿಯಾಯಿತಿ ಪಡೆಯಲು ಅನುವು ಮಾಡಿರುತ್ತದೆ. |
| ಓ) ಅಪರಾ ತಪರಾ ಅನುವು | 0.00 | 291.50 | -291.50 | ಚಿಕ್ಕೇರೂರ ಶಾಖೆಯಲ್ಲಿಯ ಅಪರಾ ತಪರಾ ಅನುವು ಮಾಡಿದ್ದು |
| ಔ) ಹೂಡಿಕೆ ಮೇಲೆ ನೀಡಿದ ಪ್ರಿಮಿಯಂ | 0.00 | 4.23 | -4.23 | ಹೂಡಿಕೆ ನೀತಿಯ ಪ್ರಕಾರ ಸರ್ಕಾರಿ ಭದ್ರತೆಯ ಗುಂತಾವಣೆಗಳ ಮೇಲೆ ಕಂತು ಕಟ್ಟಿದ್ದು |
| ನಿರೀಕ್ಷಿತ ಲಾಭ | 700.00 | 510.70 | | |
| **ಒಟ್ಟು** | **9460.00** | **10424.33** | | |

ಕಾರಣ 2022-23ನೇ ಸಾಲಿನ ವಿವಿಧ ಕಲಂಗಳ ಮೇಲೆ ಸ್ವೀಕೃತ ಅಂದಾಜು ವೆಚ್ಚಕ್ಕಿಂತ ಹೆಚ್ಚಿಗೆ ಖರ್ಚು ಆಗಿದ್ದರ ತಪಶೀಲುಗಳನ್ನು ವಾರ್ಷಿಕ ಮಹಾಸಭೆಗೆ ಅನುಮೋದನೆಗಾಗಿ ಮಂಡಿಸಿದೆ.

# ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ ಲಿ.,ಧಾರವಾಡ

**ವಿಷಯ 10:**

**10(ಬ): ಸನ್ 2023-24 ನೇ ಸಾಲಿನ ಅಂದಾಜು ಆಯವ್ಯಯ ಪತ್ರಿಕೆಗೆ ಮಂಜೂರಾತಿ ನೀಡುವ ಕುರಿತು.**

**ಟಿಪ್ಪಣೆ :**

ಸನ್ 2023-24ನೇ ಸಾಲಿಗೆ ಈ ಕೆಳಗಿನಂತೆ ಅಂದಾಜು ಆಯವ್ಯಯ ಪತ್ರಿಕೆಯನ್ನು ಸಭೆಯ ಮಂಜೂರಾತಿಗಾಗಿ ಮಂಡಿಸಿದೆ.

| ಖರ್ಚಿನ ಬಾಬುಗಳ ವಿವರ | | ಮೊತ್ತ | ಉತ್ಪನ್ನ ಬಾಬುಗಳ ವಿವರ | ಮೊತ್ತ |
|---|---|---|---|---|
| 1) ಠೇವುಗಳ ಮೇಲಿನ ಬಡ್ಡಿ | | 4200.00 | 1)ಸಾಲಗಳ ಮೇಲಿನ ಬಡ್ಡಿ | 9200.00 |
| 2) ಸಾಲಗಳ ಮೇಲಿನ ಬಡ್ಡಿ | | 2200.00 | 2) ಗುಂತಾವಣೆಗಳ ಮೇಲಿನ ಬಡ್ಡಿ | 1700.00 |
| 3) ಸಂಬಳ ಭತ್ತೆ ವ ಇತರೆ | | 3300.00 | 3)ಇತರೆ ಆದಾಯ | 525.00 |
| 4) ಭಾಡಿಗೆ ಕರ ವಿಮೆ ವಗೈರೆ | | 175.00 | | |
| 5) ಸಲಹೆಗಾರರ/ಪ್ರೇರಕರ/ಇತರೆ ಗೌರವಧನ | | 35.00 | | |
| 6) ಕಟ್ಟಡ ನಿರ್ವಹಣೆ/ ಹೊಸ ಕಟ್ಟಡ ನಿರ್ಮಾಣದ ವೆಚ್ಚ | | | | |
| 7) ಟಿ.ಸಿ.ಎಸ್. ಕಂಪನಿ ಭಾಡಿಗೆ/ ನಿರ್ವಹಣೆ ವೆಚ್ಚ | | 140.00 | | |
| 8) ಟಪಾಲ, ಫೋನ | | 15.00 | | |
| 9) ಲೆಕ್ಕ ಪರಿಶೋಧಕರ ವೆಚ್ಚ | | 30.00 | | |
| 10) ಪ್ರಿಂಟಿಂಗ, ಸ್ಟೇಶನರಿ, ಜಾಹಿರಾತು | | 30.00 | | |
| 11) ವಾಹನಗಳ ವೆಚ್ಚ | | 25.00 | | |
| 12) ಆದಾಯ ಕರ | | 0.00 | | |
| 13) ಇತರೆ | | 450.00 | | |
| ಇ) ಪೀಠೋಪಕರಣ ವಾಹನಗಳ ಸವಕಳಿ | 75.00 | | | |
| ಈ) ಥಿಗ್ರಿ ಕಮಿಶನ್ | 155.00 | | | |
| ಉ) ದೇಣಿಗೆ | 5.00 | | | |
| ಊ) ನಿರ್ದೇಶಕರ ಭತ್ತೆ | 15.00 | | | |
| ಎ) ಬೇವಾತೆರಿಗೆ | 75.00 | | | |
| ಏ) ಡರಬೇತಿ ವೆಚ್ಚ | 10.00 | | | |
| ಐರಿ) ಸಭೆ ಸಮಾರಂಭದಲ್ಲಿ ಅತಿಥಿ ಸತ್ಕಾರ | 10.00 | | | |
| ಒ) ಲೀಗಲ್ ಫೀ | 5.00 | | | |
| ಓ) ಇತರೆ | 100.00 | | | |
| 14) ನಿರೀಕ್ಷಿತ ಲಾಭ | | 825.00 | | |
| **ಒಟ್ಟು** | | **11425.00** | | **11425.00** |

ಕಾರಣ ಸದರ 2023-24 ನೇ ಸಾಲಿನ ಅಂದಾಜು ಆಯವ್ಯಯ ಪತ್ರಿಕೆಯನ್ನು ವಾರ್ಷಿಕ ಮಹಾಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ವಿಷಯ-11:**

**ನಿರ್ದಿಷ್ಟ ಮೀಸಲುಗಳು ಹಾಗೂ ಇತರೇ ನಿಧಿಗಳನ್ನು ಸೃಷ್ಟಿಸುವ ಕುರಿತು.**

**ಟಿಪ್ಪಣೆ:**

ಬ್ಯಾಂಕಿನ ಸ್ಟ್ಯಾಂಡರ್ಡ್ ಅಸೆಟ್ಸ್ ಹಾಗೂ ಬ್ಯಾಂಕಿನ ಆದಾಯತರದ ಆಸ್ತಿಗಳನ್ನು ಆರ್.ಬಿ.ಆಯ್. ಸುತ್ತೋಲೆಗಳ ಪ್ರಕಾರ ವಿವಿಧ ಪ್ರವರ್ಗಗಳಲ್ಲಿ ವರ್ಗಿಕರಿಸಿ ಈ ಬಗ್ಗೆ ಬ್ಯಾಂಕು ನಿಧಿಯನ್ನು ಸೃಷ್ಟಿಸುವ ಅನುವು ಮಾಡಿದ ವಿವರ ಈ ಕೆಳಗಿನಂತಿರುತ್ತದೆ.

# ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ ಲಿ.,ಧಾರವಾಡ

ರೂ.ಲಕ್ಷಗಳಲ್ಲಿ)

| ಅನಂ | ವರ್ಷ | ಆಯಾ ವರ್ಷದಲ್ಲಿ ಅನುವು ಮಾಡಿದ ನಿಧಿಯ ರಕಂ | ಮುಳುಗುವ ಸಾಲದ ನಿಧಿ | ಹೆಚ್ಚುವರಿ ಅನುವು ಮರು ಹೊಂದಾಣಿಕೆ ಮಾಡಿದ್ದು | ವರ್ಷಾಂತ್ಯಕ್ಕೆ ಇದ್ದಂತೆ ನಿಧಿಯ ಮೊತ್ತ | ಉತ್ತಮ ಸಾಲಗಳ ಮೇಲೆ ಅನುವು ಮಾಡಿದ ನಿಧಿಯ ರಕಂ |
|---|---|---|---|---|---|---|
| 1 | 1996-97 | 80.35 | 229.39 | 0.00 | 309.74 | 0.00 |
| 2 | 1998-99 | 110.92 | 229.39 | 0.00 | 420.66 | 0.00 |
| 3 | 1999-2000 | 1025.83 | 229.39 | 0.00 | 1446.49 | 67.40 |
| 4 | 2000-01 | 3066.86 | 232.47 | 0.00 | 4516.43 | 0.00 |
| 5 | 2001-02 | 1023.82 | 232.47 | 0.00 | 5540.25 | 0.00 |
| 6 | 2002-03 | 1632.96 | 232.47 | 0.00 | 7173.21 | 0.00 |
| 7 | 2004-05 | 914.83 | 232.47 | 0.00 | 8088.04 | 0.00 |
| 8 | 2010-11 | 0.00 | 232.47 | 1500.00 | 6588.04 | 27.00 |
| 9 | 2011-12 | 0.00 | 232.47 | 1500.00 | 5088.04 | 40.00 |
| 10 | 2012-13 | 0.00 | 232.47 | 1400.00 | 3688.04 | 0.00 |
| 11 | 2014-15 | 0.00 | 250.65 | 303.05 | 3403.17 | 16.00 |
| 12 | 2016-17 | 0.00 | 265.71 | 90.36 | 3327.87 | 0.00 |
| 13 | 2019-20 | 0.00 | 296.38 | 377.47 | 2981.07 | 0.00 |
| 14 | 2020-21 | 0.00 | 299.58 | 795.64 | 2188.63 | 52.00 |
| 15 | 2021-22 | 0.00 | 304.94 | 0.00 | 2194.23 | 100.00 |
| 16 | 2022-23 | 0.00 | 404.94 | 0.00 | 2226.23 | 100.00 |

ವಿ.ಸೂ: ಸನ್ 2005-06 ರಿಂದ 2022-23 ನೇ ಸಾಲುಗಳಲ್ಲಿ ಆದಾಯ ಗಳಿಸದ ಆಸ್ತಿಗಳಲ್ಲಿ ಹೆಚ್ಚಿನ ಅನುವು ಮಾಡಿರುವುದಿಲ್ಲ. ಹಾಗೂ ಹೆಚ್ಚಿನ ಅನುವು ಕಲ್ಪಿಸಿರುವುದನ್ನು 2010-11, 2011-12, 2012-13, 2014-15, 2016-17, 2019-20 ಮತ್ತು 2020-21 ರಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳಲಾಗಿದೆ.

**ವಿಷಯ 12:**

**ಬ್ಯಾಂಕು ಇತರೆ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಪಡೆದಿರುವದನ್ನು ಅನುಮೋದಿಸುವದು.**

**ಟಿಪ್ಪಣೆ :**

ಬ್ಯಾಂಕು ವರದಿ ಸಾಲಿನಲ್ಲಿ ಯಾವದೇ ಸದಸ್ಯತ್ವ ಪಡೆದಿರುವದಿಲ್ಲ.

**ವಿಷಯ-13:**

**ಯಾವುದೇ ಆಧೀನ ಸಂಸ್ಥೆಗಳ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳಿದ್ದಲ್ಲಿ ಅವುಗಳನ್ನು ಅವಲೋಕಿಸುವದು.**

**ಟಿಪ್ಪಣೆ:**

ಬ್ಯಾಂಕಿಗೆ ಯಾವುದೇ ಆಧೀನ ಸಂಸ್ಥೆಗಳು ಇರುವದಿಲ್ಲ.

**ವಿಷಯ-14:**

**ಆಡಳಿತ ಮಂಡಳಿ ಸದಸ್ಯರ ಅಥವಾ ಮುಖ್ಯ ಕಾರ್ಯನಿರ್ವಾಹಕರ ಸಂಬಂಧಿಕರಾಗಿದ್ದು ಬ್ಯಾಂಕಿನ ನೌಕರರಾಗಿ ನೇಮಕಾತಿಗೊಂಡಲ್ಲಿ ಅಂಥಹ ನೌಕರರ ಪಟ್ಟಿಯನ್ನು ಅವಲೋಕಿಸುವುದು.**

**ಟಿಪ್ಪಣೆ:**

ವರದಿ ಸಾಲಿನಲ್ಲಿ 46 ಜನ ಸಿಪಾಯಿ ಹಾಗೂ 87 ಜನ ಕ್ಲಾರ್ಕ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿದ್ದು, ಅವರ ಪಟ್ಟಿಯನ್ನು ಬ್ಯಾಂಕಿನ ನಾಮಫಲಕದಲ್ಲಿ ಸದಸ್ಯರ ಅವಲೋಕನೆಗೆ ಇಡಲಾಗಿದೆ.

**ವಿಷಯ-15:**

**ಬ್ಯಾಂಕಿನ ಉಪ ನಿಯಮಗಳ ತಿದ್ದುಪಡಿ ಕುರಿತು.**

**ಟಿಪ್ಪಣಿ:**

ನಮ್ಮ ಬ್ಯಾಂಕಿನ ಅಧಿಕೃತ ಶೇರು ಭಂಡವಾಳ ಅ:ಬ:ಕ ವರ್ಗಗಳ ಶೇರುಗಳಿಗೆ ಸಂಬಂಧಿಸಿದಂತೆ ರೂ.11000.00 ಲಕ್ಷಗಳವರೆಗೆ ಶೇರು ಭಂಡವಾಳ ಆಕರಣೆ ಮಾಡಲು ಮಂಜೂರಾತಿ ಇರುತ್ತದೆ. ಅದರಂತೆ ಇದು ವರದಿ ಸಾಲಿನಲ್ಲಿ ಬ್ಯಾಂಕಿಗೆ ಗೊತ್ತುಪಡಿಸಿದ ಪಿ.ಎಲ್.ಪಿ ಗುರಿ (ಕ್ರೆಡಿಟ್ ಲಿಂಕ್ಡ ಪ್ಲಾನ್) ಯನ್ವಯ ಹಾಗೂ ಬ್ಯಾಂಕು ಹಾಕಿಕೊಂಡ ಶೇರು ಆಕರಣೆ ಗುರಿಯನ್ವಯ ಸಾಧನೆಯನ್ನು ಮಾಡಿ ದಿ:31-03-2023ಕ್ಕೆ ಒಟ್ಟಾರೆ ರೂ.9517.30 ಲಕ್ಷಗಳಷ್ಟು ಶೇರುಗಳನ್ನು ಹೊಂದಿರುವುದರಿಂದ ಬ್ಯಾಂಕು ತನ್ನ ಅಧಿಕೃತ ಶೇರು ಭಂಡವಾಳವನ್ನು ಹೆಚ್ಚಿಸಿಕೊಳ್ಳುವುದು ಅವಶ್ಯವಿರುತ್ತದೆ. ಬ್ಯಾಂಕಿನ ವ್ಯವಹಾರವು ರೂ.2143.44 ಕೋಟಿಗಳಿಗೆ ಬಂದು ತಲುಪಿದ್ದು ಇದು ಠೇವಣಿ ಸಂಗ್ರಹಣೆ ಮತ್ತು ಸಾಲ ವಿತರಣೆಯ ಗುರಿಯನ್ನು ಸಾಧಿಸಿದ್ದರಿಂದ ಬ್ಯಾಂಕು ಯೋಜನೆಯಂತೆ ಕಾರ್ಯನಿರ್ವಹಿಸಿರುತ್ತದೆ. ಇದರಿಂದ ಬ್ಯಾಂಕಿನ ರಿಸ್ಕ ವೇಟೇಡ್ ಆಸ್ತಿಗಳು (ಸಾಲಗಳು) ಹೆಚ್ಚಿಗೆ ಆಗಿರುವುದರಿಂದ ಬ್ಯಾಂಕ ಲಾಭ-ಹಾನಿ ಸರಿದೂಗಿಸಬೇಕಾಗಿರುವುದರಿಂದ ಮತ್ತು ಸಿ.ಆರ್.ಎ.ಆರ್ 9%ಕ್ಕಿಂತ ಹೆಚ್ಚಿಗೆ ಕಾಯ್ದಿರಿಸುವಿಕೆಯಿಂದ ಶೇರು ಬಂಢವಾಳವನ್ನು ಕ್ರೂಢೀಕರಣ ಮಾಡಲು ರೂ.15000.00 ಲಕ್ಷಗಳವರೆಗೆ ಈ ಕೆಳಗಿನಂತೆ ಅ. ಬ. ಕ ವರ್ಗದ ಅಧೀಕೃತ ಶೇರು ಭಂಡವಾಳ ಮತ್ತು ಮುಖಬೆಲೆಯನ್ನು ಪರಿಷ್ಕರಿಸುವ ಕುರಿತು ಸಭೆಯ ನಿರ್ಣಯಕ್ಕೆ ಸಲ್ಲಿಸಿದೆ.

| ಉಪ ನಿಯಮ ಸಂಖ್ಯೆ | ಹಾಲಿ ಇರುವ ಉಪ ನಿಯಮ | ತಿದ್ದುಪಡಿ ನಂತರದ ಉಪ ನಿಯಮ | ತಿದ್ದುಪಡಿಗೆ ಕಾರಣ |
|---|---|---|---|
| | **ಅಧಿಕೃತ ಶೇರು ಬಂಡವಾಳ ರೂ.15,000 ಲಕ್ಷಗಳ ಮಿತಿಯಲ್ಲಿಯೇ ಈ ಕೆಳಗಿನಂತೆ ವಿವರಿಸಿದೆ.** | | |
| 4 | ಬಂಡವಾಳ<br>ಈ ಕೆಳಗೆ ನಮೂದಿಸಿದ ಶೇರುಗಳ ಮೂಲಕ ಕೇಂದ್ರ ಬ್ಯಾಂಕಿನ ಶೇರು ಬಂಡವಾಳವು ರೂ.11000 ಲಕ್ಷಗಳು ಇರತಕ್ಕದ್ದು,<br><br>ಅ ವರ್ಗದ ಶೇರುಗಳು 70000 x 1000 ಪ್ರತಿ ಶೇರು 700.00 ಲಕ್ಷಗಳು<br><br>ಬ ವರ್ಗದ ಶೇರುಗಳು 8500000 x 100 ಪ್ರತಿ ಶೇರು 8500.00 ಲಕ್ಷಗಳು<br><br>ಕ ವರ್ಗದ ಶೇರುಗಳು 1800000 x 100 ಪ್ರತಿ ಶೇರು 1800.00 ಲಕ್ಷಗಳು<br><br>**11000.00 ಲಕ್ಷಗಳು** | ಭಂಡವಾಳ<br>ಈ ಕೆಳಗೆ ನಮೂದಿಸಿದ ಶೇರುಗಳ ಮೂಲಕ ಕೇಂದ್ರ ಬ್ಯಾಂಕಿನ ಶೇರು ಭಂಡವಾಳವು ರೂ.15000 ಲಕ್ಷಗಳು ಇರತಕ್ಕದ್ದು,<br><br>ಅ ವರ್ಗದ ಶೇರುಗಳು 100000 ಗಿ 1000 ಪ್ರತಿ ಶೇರು 1000.00 ಲಕ್ಷಗಳು<br><br>ಬ ವರ್ಗದ ಶೇರುಗಳು 11500000 ಗಿ 100 ಪ್ರತಿ ಶೇರು 11500.00 ಲಕ್ಷಗಳು<br><br>ಕ ವರ್ಗದ ಶೇರುಗಳು 2500000 ಗಿ 100 ಪ್ರತಿ ಶೇರು 2500.00 ಲಕ್ಷಗಳು<br><br>**15000.00 ಲಕ್ಷಗಳು** | ಬ್ಯಾಂಕಿನ ವ್ಯವಹಾರವು ವೃದ್ಧಿಯಾದಂತೆ ಬ್ಯಾಂಕಿನ ರಿಸ್ಕ ವೇಟೇಡ ಆಸ್ತಿಗಳು (ಸಾಲಗಳು) ಹೆಚ್ಚಿಗೆಯಾಗಿದ್ದು ಬ್ಯಾಂಕು ಲಾಭ-ಹಾನಿ ಸರಿದೂಗಿಸಬೇಕಾಗಿರುವುದರಿಂದ ಮತ್ತು ಆರ್.ಬಿ.ಆಯ್ ನಿರ್ದೇಶನದನ್ವಯ ಸಿ.ಆರ್.ಎ.ಆರ್ ಶೇ.9%ಕ್ಕಿಂತ ಹೆಚ್ಚಿಗೆ ಕಾಪಾಡಿಕೋಳ್ಳುವುದಕ್ಕೋಸ್ಕರ ಬ್ಯಾಂಕು ಸದಸ್ಯರುಗಳಿಂದ ಹೆಚ್ಚುವರಿ ಶೇರುಗಳನ್ನು ಆಕರಣೆ ಮಾಡುವುದಕ್ಕೋಸ್ಕರ ಅಧಿಕೃತ ಶೇರು ಭಂಡವಾಳವನ್ನು ಹೆಚ್ಚಿಸಿಕೊಳ್ಳಲು. |

**ವಿಷಯ-16:**

**ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು, ಪದಾಧಿಕಾರಿಗಳು ಮತ್ತು ನೌಕರರ ವರ್ತನೆ (ಕೋಡ ಆಫ್ ಕಂಡಕ್ಟ) ಗಳನ್ನು ರೂಪಿಸುವ ಬಗ್ಗೆ.**

**ಟಿಪ್ಪಣೆ:**

ಬ್ಯಾಂಕಿನಲ್ಲಿ ಆಡಳಿತ ಮಂಡಳಿ ಸದಸ್ಯರು/ಪದಾಧಿಕಾರಿಗಳ ವರ್ತನೆ (ಕೋಡ ಆಫ್ ಕಂಡಕ್ಟ)ಗಳನ್ನು ನಬಾರ್ಡ ನಿರ್ದೇಶನಗಳ ಪ್ರಕಾರ ರೂಪಿಸಿ 2009-10ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಅನುಮೋದನೆ ಪಡೆದುಕೊಳ್ಳಲಾಗಿದೆ. ಸನ್ 1993 ರಲ್ಲಿ ನಿಬಂಧಕರಿಂದ ಅನುಮೋದಿಸಲ್ಪಟ್ಟ ಸಿಬ್ಬಂದಿ ಸೇವಾ ನಿಯಮಗಳು ಜಾರಿಯಲ್ಲಿವೆ.

**ವಿಷಯ-17:**

**ಬ್ಯಾಂಕಿನ ಸದಸ್ಯ ಸಂಘಗಳಿಂದ ಹಾಗೂ ನಿರ್ದೇಶಕರಿಂದ ಬ್ಯಾಂಕಿನ ಸೇವೆಗಳ ಬಳಕೆಯ ಬಗ್ಗೆ ವಿಮರ್ಶೆ.**

**ಟಿಪ್ಪಣೆ:**

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ಬ್ಯಾಂಕಿನ ಉಪನಿಯಮಗಳಡಿ ನಿಗದಿಪಡಿಸಿದ ಹೊಣೆಗಾರಿಕೆಗಳನ್ನು ಸದಸ್ಯರು ಪೂರ್ಣಗೊಳಿಸಿರಬೇಕು.

**ವಿಷಯ-18:**

**ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಲಾದ ಸಾಲಗಳು ಸುಸ್ತಿ ಬಾಕಿ ಯಾವುದಾದರೂ ಇದ್ದರೆ ಅವುಗಳ ಹಾಗೂ ಅಂತಹ ಸುಸ್ತಿ ಬಾಕಿಗಳ ವಸೂಲಿಗಾಗಿ ಕೈಕೊಂಡ ಕ್ರಮದ ಪರಿಶೀಲನೆ.**

**ಟಿಪ್ಪಣೆ:**

ಇಂತಹ ಯಾವುದೇ ಕಟಬಾಕಿ ಪ್ರಕರಣ ಇರುವುದಿಲ್ಲ.

**ವಿಷಯ-19:**

**ಪದಾಧಿಕಾರಿಗಳು ಸೇರಿದಂತೆ ನಿರ್ದೇಶಕರುಗಳಿಗೆ, ಅವರ ಸ್ಥಾನಗಳ ಕರ್ತವ್ಯಗಳಿಗೆ ಅಥವಾ ಸಂಬಂಧಿತ ಸಭಗಳಿಗೆ ಹಾಜರಾದುದಕ್ಕೆ ಸಂಬಂಧಪಟ್ಟಂತೆ ಅವರುಗಳಿಗೆ ನೀಡುವ ಸಂಭಾವನೆ, ಪ್ರಯಾಣ ಭತ್ತೆ, ದಿನಭತ್ತೆ ಮತ್ತು ಇತರೇ ಭತ್ತೆಗಳನ್ನು ಬ್ಯಾಂಕಿನ ಆರ್ಥಿಕ ಪರಿಸ್ಥಿತಿ ಮತ್ತು ಲಾಭದಾಯಕತೆಗಳನ್ನು ಗಮನದಲ್ಲಿಟ್ಟು ನಿಗದಿ ಮಾಡುವುದು ಹಾಗೂ ಇವುಗಳನ್ನು ಸಂದಾಯ ಮಾಡಿದ ಬಗ್ಗೆ ವಿಮರ್ಶೆ ನಡೆಸುವದು.**

**ಟಿಪ್ಪಣೆ:**

ಪ್ರಸ್ತುತ ಇಂತಹ ಯಾವುದೇ ಪ್ರಸ್ತಾಪ ಇರುವುದಿಲ್ಲ.

**ವಿಷಯ-20 :**

**ಹೊಸ ಸದಸ್ಯತ್ವ ನೀಡಿದ್ದರ ಕುರಿತು.**

**ಟಿಪ್ಪಣೆ:**

ಬ್ಯಾಂಕಿಗೆ ಹೊಸದಾಗಿ ಸನ್ 2022-23ನೇ ಸಾಲಿನಲ್ಲಿ 'ಬ' ವರ್ಗದ ಸದಸ್ಯತ್ವ ಕುರಿತು ಅವಶ್ಯಕ ದಾಖಲಾತಿಗಳೊಂದಿಗೆ ಸಂಘಗಳ ವಿನಂತಿ ಮೇರೆಗೆ ಹಾಗೂ ಸಂಬಂಧಿಸಿದ ಶಾಖಾ ವ್ಯವಸ್ಥಾಪಕರು ಮಾಡಿರುವ ಶಿಫಾರಸ್ಸಿನನ್ವಯ ಮತ್ತು ಈ ಕೆಳಕಂಡ ಸಂಘಗಳಿಗೆ ಬ್ಯಾಂಕಿನ 'ಬ' ವರ್ಗದ ಸದಸ್ಯತ್ವವನ್ನು ಆಡಳಿತ ಮಂಡಳಿ ಸಭೆಯಲ್ಲಿ ಮಂಜೂರಿ ನೀಡಿರುವುದನ್ನು ಅಂಗೀಕರಿಸಲು ಬ್ಯಾಂಕಿನ ವಾರ್ಷಿಕ ಸರ್ವಸಾಧಾರಣ ಸಭೆಗೆ ಸಲ್ಲಿಸಿದೆ.

| ಅನಂ | ಸಂಘದ ಹೆಸರು |
|---|---|
| 1 | ಶ್ರೀ ಬಸವೇಶ್ವರ ಕೋ-ಆಪರೇಟಿವ್ ಸೊಸಾಯಿಟಿ ನಿ., ಅಣ್ಣಿಗೇರಿ, ತಾ:ಅಣ್ಣಿಗೇರಿ ಜಿ: ಧಾರವಾಡ |
| 2 | ನಾಗಾರ್ಜುನ ಸೌಹಾರ್ದ ಕೋ-ಆಪರೇಟಿವ ನಿ., ಧಾರವಾಡ ಶ್ರೀಬನಶಂಕರಿ ಆರ್ಕೇಡ, ಧಾರವಾಡ |
| 3 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ತುಮರಿಕೊಪ್ಪ, ತಾ:ಕಲಘಟಗಿ ಜಿ: ಧಾರವಾಡ |
| 4 | ವೀರಭದ್ರೇಶ್ವರ ಕೃಪಾ ಪತ್ತಿನ ಸೌಹಾರ್ದ ಸಹಕಾರಿ ನಿ., ಕಲಘಟಗಿ, ತಾ: ಕಲಘಟಗಿ ಜಿ: ಧಾರವಾಡ |
| 5 | ಕಾಳಿದಾಸ ಸಹಕಾರ ಸಂಘ ನಿ., ರೋಣ ತಾ: ರೋಣ ಜಿ: ಗದಗ |
| 6 | ಪ್ರಭುಲಿಂಗೇಶ್ವರ ಜಿ.ಎಸ್.ಎಸ್. ನಿ., ಹಳೇಹುಬ್ಬಳ್ಳಿ, ತಾ: ಹುಬ್ಬಳ್ಳಿ ಜಿ: ಧಾರವಾಡ |
| 7 | ಸಂಗೂರ ಹಾಲು ಉತ್ಪಾದಕರ ಸಹಕಾರಿ ಸಂಘ ನಿ., ಸಂಗೂರ, ತಾ: ಹಾವೇರಿ ಜಿ: ಹಾವೇರಿ |
| 8 | ಎಣ್ಣೆಬೀಜ ಬೆಳೆಗಾರರ ಸಂಸ್ಕರಣ ಸಹಕಾರ ಸಂಘ ನಿ., ಹೊಸೂರ, ಬೆಳ್ಳಟ್ಟಿ, ತಾ: ಶಿರಹಟ್ಟಿ ಜಿ: ಗದಗ |
| 9 | ಎಣ್ಣೆಬೀಜ ಬೆಳೆಗಾರರ ಸಂಸ್ಕರಣ ಸಹಕಾರ ಸಂಘ ನಿ., ಸಂಗೂರ, ತಾ: ಹಾವೇರಿ, ಜಿ: ಹಾವೇರಿ |
| 10 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಹೊಸೂರ ತಾ: ಶಿಗ್ಗಾಂವ ಜಿ: ಹಾವೇರಿ |
| 11 | ಶ್ರೀ ವೀರಶೈವ ಲಿಂಗಾಯತ ಪಂಚಮಸಾಲಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬ್ಯಾಡಗಿ ತಾ:ಬ್ಯಾಡಗಿ ಜಿ:ಹಾವೇರಿ |

**ವಿಷಯ-21 :**

**ಸದಸ್ಯತ್ವದಿಂದ ಕಡಿಮೆ ಮಾಡಿದ್ದರ ಕುರಿತು**

**ಟಿಪ್ಪಣೆ :**

ವರದಿ ವರ್ಷದಲ್ಲಿ ಬ್ಯಾಂಕಿನ ಸದಸ್ಯತ್ವದಿಂದ ಯಾವುದೇ ಸಂಘವನ್ನು ಕಡಿಮೆ ಮಾಡಿರುವುದಿಲ್ಲ.

**ವಿಷಯ-22 :**

**ಉಪ ನಿಯಮಗಳಿನುಸಾರವಾಗಿ ಮಂಡಿಸಬಹುದಾದ ಇತರೆ ವಿಷಯಗಳು.**

**ಟಿಪ್ಪಣೆ :**

ಇಂತಹ ಯಾವುದೇ ವಿಷಯಗಳಿರುವುದಿಲ್ಲ.

**ವಿಷಯ-23 :**

**ಬ್ಯಾಂಕಿನ 2023-24ನೇ ಸಾಲಿಗೆ ಶಾಸನಬದ್ದ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಕುರಿತು.**

**ಟಿಪ್ಪಣಿ :**

ನಬಾರ್ಡ ಪತ್ರ ದಿ : 25-04-2022 ನೇದ್ದರನ್ವಯ ಅರ್ಹತೆ ಹೊಂದಿರುವ ಸನ್ನದು ಲೆಕ್ಕಪರಿಶೋಧಕರ ಸಂಸ್ಥೆಯನ್ನು ಬ್ಯಾಂಕಿನ ವಾರ್ಷಿಕ ಮಹಾಸಭೆಯಲ್ಲಿ ಆಯ್ಕೆ ಮಾಡಿಕೊಂಡು ಆರ್.ಬಿ.ಆಯ್ ದಿಂದ ಅನುಮೋದನೆ ಪಡೆದು ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳಲು ಮತ್ತು ಮುಂದುವರೆದು, ಕ.ಸ.ಸಂ ಕಾಯ್ದೆ 1960 ನಿಯಮ 29-ಬಿ(6) ರನ್ವಯ 2 ಸಾಲಿನ ಲೆಕ್ಕಪರಿಶೋಧನೆಯನ್ನು ನಿರ್ವಹಿಸಿ, 3ನೇ ಸಾಲಿಗೂ ಸಹ ಸತತ ಅದೇ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆಯಾಗದಂತೆ ಕ್ರಮವಹಿಸಲು ಆದೇಶಿಸಿರುವರು. ನಬಾರ್ಡ ಪತ್ರ ದಿ:25-04-2022 ನೇದ್ದರಲ್ಲಿ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಮಾರ್ಗಸೂಚಿಗಳನ್ನು ತಿಳಿಸಿರುವರು.

1. Institute of Chartered Accountants of India ಇವರು ಪೂರೈಸಿದ ಯಾದಿಯಲ್ಲಿದಂತಹ ಲೆಕ್ಕಪರಿಶೋಧಕರನ್ನು ಮಾತ್ರ ನೇಮಕ ಮಾಡಿಕೊಳ್ಳಬೇಕು.
2. ಫರ್ಮ ಸ್ಥಾಪನೆಯಾದ ವರ್ಷ, ಬ್ಯಾಂಕಆಡಿಟ್ ಮಾಡಿದಅನುಭವ ಇತ್ಯಾದಿ.
3. 1 ಮತ್ತು 2 ನೇ ಶ್ರೇಣಿ ಫರ್ಮನ್ನುಆಯ್ಕೆ ಮಾಡುವುದು. ಒಂದು ವೇಳೆ 3 ನೇ ಶ್ರೇಣಿಯಲ್ಲಿದ್ದು, ಒಳ್ಳೆಯ ಅನುಭವ ಹೊಂದಿದಲ್ಲಿಆಯ್ಕೆ ಮಾಡಬಹುದಾಗಿದೆ.
4. DISA ಹೊಂದಿದ್ದು, Institute of Chartered Accountants of India ಇವರು ಪೂರೈಸಿದ ಯಾದಿಯಲ್ಲಿದಂತಹ ಲೆಕ್ಕಪರಿಶೋಧಕರನ್ನು ಮಾತ್ರ ನೇಮಕ ಮಾಡಿಕೊಳ್ಳಬೇಕು.
5. 2 ವರ್ಷಕ್ಕೆ ಮಾತ್ರ ಲೆಕ್ಕಪರಿಶೋಧನೆಗೆ ನೇಮಕ ಮಾಡಿಕೊಳ್ಳಬೇಕು.
6. ನಬಾರ್ಡ / ಆರ್.ಬಿ.ಆಯ್ / ಇಲಾಖೆಗಳಿಂದ ಕಾಲ ಕಾಲಕ್ಕೆ ಹೊರಡಿಸಿದ ಆದೇಶ ಮತ್ತು ಮಾರ್ಗಸೂಚಿಗಳನ್ನು ಪಾಲಿಸತಕ್ಕದ್ದು.

ಕಾರಣ ಮಾನ್ಯ ಸ.ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಬೆಂಗಳೂರ ಇವರು ನಿರ್ವಹಣೆ ಮಾಡಿದ DISA ಪ್ರಮಾಣಪತ್ರ ಹೊಂದಿದ ಚಾರ್ಟರ್ಡ ಅಕೌಂಟಂಟರ ಯಾದಿಯಲ್ಲಿರುವ ಲೆಕ್ಕಪರಿಶೋಧಕರನ್ನು ಬ್ಯಾಂಕಿನ ಸನ್ 2023-24ನೇ ಸಾಲಿನ ಲೆಕ್ಕಪರಿಶೋಧನೆಗೆ ಭಾರತೀಯ ರಿಜರ್ವ ಬ್ಯಾಂಕಿನಿಂದ ಅನುಮೋದನೆ ಪಡೆದು ನೇಮಕಮಾಡಿಕೊಳ್ಳಲು ವಾರ್ಷಿಕ ಮಹಾಸಭೆಯ ನಿರ್ಣಯಕ್ಕೆ ಮಂಡಿಸಿದೆ.

**ವಿಷಯ-24:**

**ಸ್ವಯಂ ಪ್ರೇರಿತ ಒಟ್ಟುಗೂಡುವಿಕೆ, ವಿಭಜನೆ, ವಿಲೀನ, ಆಸ್ತಿ ಮತ್ತು ಜವಾಬ್ದಾರಿಗಳ ವರ್ಗಾವಣೆ.**

**ಟಿಪ್ಪಣೆ:**

ಪ್ರಸ್ತುತ ಅಂತಹ ಯಾವುದೇ ಪ್ರಸ್ತಾವನೆಗಳಿರುವದಿಲ್ಲ.

**ವಿಷಯ-25:**

**ಆಡಳಿತ ಮಂಡಳಿ ತೀರ್ಮಾನಗಳ ವಿರುದ್ಧ ಸಲ್ಲಿಸಲ್ಪಟ್ಟ ಮೇಲ್ಮನವಿಗಳ ವಿಚಾರಣೆ ಮತ್ತು ವಿಲೇವಾರಿ ಮಾಡುವುದು.**

**ಟಿಪ್ಪಣೆ :** ಅಂತಹ ಯಾವುದೇ ಮೇಲ್ಮನವಿಗಳು ಇರುವುದಿಲ್ಲ.

## ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ ಲಿ.,ಧಾರವಾಡ

**ವಿಷಯ-26:**

**ವಸೂಲಾತಿ ಸಾಧ್ಯವಿಲ್ಲವೆಂದು ಪರಿಗಣಿಸಲಾದ ಕಟಬಾಕಿ (ಹೋಕು) ಸಾಲಗಳ ಬಗ್ಗೆ ತೀರ್ಮಾನ.**

**ಟಿಪ್ಪಣೆ :** ಅಂತಹ ಯಾವುದೇ ಪ್ರಸ್ತಾವೆಗಳು ಇರುವುದಿಲ್ಲ.

**ವಿಷಯ-27:**

**ಬ್ಯಾಂಕಿನ ಶಾಖೆಗಳಲ್ಲಿನ ಹಣಕಾಸಿನ ವ್ಯವಹಾರಗಳಲ್ಲಿ ಉಂಟಾದ ಲೋಪದ ಪ್ರಕರಣಗಳಲ್ಲಿ ರಿಯಾಯತಿಗೊಳಿಸಿ ಜಮಾ ಪಡೆದುಕೊಳ್ಳುವ ಕುರಿತು.**

**ಟಿಪ್ಪಣಿ (1) :**

**(1) ಶ್ರೀ ಕೆ. ಎಸ್. ಕುರಹಟ್ಟಿ (ವಜಾ)** ಇವರಿಗೆ ಪಾವತಿಸತಕ್ಕ ಹಣಕಾಸಿನ ಸೌಲಭ್ಯಗಳನ್ನು ಬ್ಯಾಂಕಿಗೆ ಬರತಕ್ಕ ರಕಂಗೆ ಅಸಲಿನಷ್ಟೇ ಬಡ್ಡಿಯನ್ನು ಜಮಾ ಪಡೆದು ಖಾತೆ ಕ್ಲೋಸ ಮಾಡಿದ್ದನ್ನು ವಾರ್ಷಿಕ ಮಹಾಸಭೆಯ ಅನುಮೋಧನೆಗೆ ಮಂಡಿಸಿದೆ.

ಟಿಪ್ಪಣೆ(1): ಶ್ರೀ ಕೆ. ಎಸ್. ಕುರಹಟ್ಟಿ (ವಜಾ) ಇವರು ಈ ಹಿಂದೆ ಮೊರಬ ಮತ್ತು ಗದಗ ಶಾಖೆಯಲ್ಲಿ ಶಾಖಾ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಸನ್ 1994-95 ರಲ್ಲಿ ಗ್ರಾಹಕರ ಎಸ್.ಬಿ ಮತ್ತು ಎಫ.ಡಿ ಖಾತೆಗಳಲ್ಲಿ ಒಟ್ಟು ರೂ.3,44,557/- ಗಳನ್ನು ಅವ್ಯವಹಾರ ಮಾಡಿದ್ದರ ಕುರಿತು ವಿಶೇಷ ಲೆಕ್ಕ ತಪಾಸಣಾ ವರದಿಯಿಂದ ಕಂಡು ಬಂದ ನಂತರ, ಸದರೀಯವರಿಗೆ ನೋಟಿಸ ನೀಡಲಾಗಿ, ರೂ.2,82,599/- ಗಳು ಬಡ್ಡಿ ಸಮೇತ ವಸೂಲಾಗಿದ್ದು, ಇನ್ನುಳಿದ ರಕಂ ರೂ.65,040.00 ಗಳನ್ನು ಅವ್ಯವಹಾರವಾದ ದಿನಾಂಕದಿಂದ 31-05-2006 ರವರೆಗೆ ಬಡ್ಡಿ ಶೇ 18 ರಂತೆ ಸೇರಿ ಒಟ್ಟು ರೂ.1,81,770/- ಗಳ ಮೇಲೆ ಕಲಂ 70 ರಡಿಯಲ್ಲಿ ಪಂಚಾಯತ ದಾವಾ ಪ್ರಕರಣವನ್ನು ಮಾನ್ಯ ಸ. ಸಂ. ಸಂಯುಕ್ತ ನಿಬಂಧಕರು ಬೆಳಗಾಂವ ಇವರ ನ್ಯಾಯಾಲಯದಲ್ಲಿ ದಾಖಲಿಸಲಾಗಿತ್ತು. ಮಾನ್ಯ ನ್ಯಾಯಾಲಯದಿಂದ ಅವ್ಯವಹಾರದ ರಕಂನ್ನು ಶೇ 18 ರಂತೆ ಬಡ್ಡಿಯೊಂದಿಗೆ ವಸೂಲಾತಿ ಮಾಡಲು ದಿ:12-12-2017 ರಂದು ಅವಾರ್ಡ ಪಾಸಾಗಿದ್ದು, ಅಸಲು ರೂ.65040/-+ ಬಡ್ಡಿ ರೂ.255260.00 (31-03-2018 ರವರೆಗೆ ಶೇ 18 ರಂತೆ) + ದಾವಾ ಫೀ ಸೇರಿಒಟ್ಟು ರೂ.3,36,706.00 ಗಳ ವಸೂಲಿಗಾಗಿ ಮಾನ್ಯ ಸ.ಸಂ.ಸಹಾಯಕ ನಿಬಂಧಕರು ವ ವಸೂಲಾಧಿಕಾರಿಗಳು ನಿ.,441 ಧಾರವಾಡ ಇವರ ಕಡೆಗೆ ದಿ:09-04-2018 ರಂದು ಅಮಲಬಜಾವಣೆ ಪ್ರಕರಣವನ್ನು ದಾಖಲಿಸಲಾಗಿರುತ್ತದೆ.

ಶ್ರೀ ಕೆ. ಎಸ್. ಕುರಹಟ್ಟಿ ಇವರು ಪತ್ರ ದಿ:05-10-2018, ದಿ:21-12-2018 ಮತ್ತು ದಿ:16-01-2020 ದಿ:22-07-2020 ನೇದ್ದರಲ್ಲಿ ಆರ್ಥಿಕ ತೊಂದರೆಯಿಂದಾಗಿ, ಜೀವನ ನಿರ್ವಹಣೆ ಕಷ್ಟವಾಗಿದ್ದು, ಅವ್ಯವಹಾರದ ರಕಂನಷ್ಟು ಬಡ್ಡಿಯನ್ನು ಜಮಾ ಮಾಡಲು ಮತ್ತು ಬ್ಯಾಂಕಿನಿಂದ ಪಾವತಿಸತಕ್ಕ ಹಣಕಾಸಿನ ಸೌಲಭ್ಯಗಳನ್ನು ಅವ್ಯವಹಾರದ ರಕಂಗೆ ಜಮಾ ತೆಗೆದುಕೊಳ್ಳಲು ವಿನಂತಿಸಿಕೊಂಡಿರುವರು.

ಸದರ ಪ್ರಕರಣ ತುಂಬಾ ಹಳೆಯದಾಗಿದ್ದು, ವಸೂಲಾತಿಯು ಕಷ್ಟಸಾಧ್ಯವಿರುವದರಿಂದ, ಇಂತಹ ಪ್ರಕರಣಗಳ ಮೇಲೆ ಸೂಕ್ತ ನಿರ್ಣಯ ತೆಗೆದುಕೊಂಡು, ವಿಲೇವಾರಿಗೆ ಕ್ರಮಗಳನ್ನು ಅನುಸರಿಸಲು ಪತ್ರ ದಿ:23-07-2020 ರಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು ವ ವಸೂಲಾಧಿಕಾರಿಗಳು ನಿ., 441 ಇವರು ತಿಳಿಸಿರುವರು.

ಸದರ ಪ್ರಕರಣ ತುಂಬಾ ಹಳೆಯದಾಗಿದ್ದು, ಸದರೀಯವರ ಹಣಕಾಸಿನ ಸೌಲಭ್ಯಗಳ ಮೊತ್ತವನ್ನು ಪಾವತಿಸಿಕೊಂಡು ಪ್ರಕರಣ ಮುಕ್ತಾಯಗೊಳಿಸಲು ದಿ:06-06-2020 ರಂದು ಜರುಗಿದ ಆಡಿಟ್ ಕಮೀಟಿ ಸಭೆಯಲ್ಲಿ ಹಾಗೂ ದಿ:28-04-2022 ರಂದು ಜರುಗಿದ ಬ್ಯಾಂಕಿನ ಕಾನೂನು ಕೋಶ ಸಭೆಯಲ್ಲಿ ಅಸಲಿನಷ್ಟೇ ಬಡ್ಡಿಯನ್ನು ಪಾವತಿಸಿಕೊಳ್ಳಲು ನಿರ್ಣಯಿಸಲಾಗಿರುತ್ತದೆ.

ಶ್ರೀ ಕೆ. ಎಸ್. ಕುರಹಟ್ಟಿ ಇವರು ಬ್ಯಾಂಕಿನಿಂದ ಪಾವತಿಸತಕ್ಕ ಹಣಕಾಸಿನ ಸೌಲಭ್ಯಗಳನ್ನು, ಸದರೀಯವರಿಂದ ಬ್ಯಾಂಕಿಗೆ ಬರತಕ್ಕ ರಕಂಗೆ ಹೊಂದಾಣಿಕೆ ಮಾಡಿಕೊಳ್ಳಲು ಮತ್ತು ಸದರೀಯವರು ಹಣಕಾಸಿನ ಸೌಲಭ್ಯಗಳಿಗೆ ಮತ್ತು ಬ್ಯಾಂಕಿನ ಸೇವೆಗೆ ಸಂಬಂದಿಸಿದಂತೆ ಬ್ಯಾಂಕಿನ ವಿರುದ್ಧ ಯಾವುದೇ ಪ್ರಾಧಿಕಾರ ಹಾಗೂ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲಿಸುವುದಿಲ್ಲವೆಂದು ಒಪ್ಪಿಕೊಂಡು ದಿ:23-02-2023 ರಂದು ಅಫಿಡೆವಿಟ್ ಸಲ್ಲಿಸಿರುವರು. ಹಾಗೂ ರೂ.20000/- ಗಳನ್ನು ದಿ:23-02-2023 ರಂದು ಮನೆ ಕಟ್ಟುವ ಸಾಲಕ್ಕೆ ಜಮಾ ಮಾಡಿರುವರು.

ಶ್ರೀ ಕೆ. ಎಸ್. ಕುರಹಟ್ಟಿ ಇವರಿಗೆ ಬ್ಯಾಂಕಿನಿಂದ ಪಾವತಿಸಕ್ಕ ರಕಂನ್ನು ದಿ:24-03-2023 ರಂದು ಸೂಕ್ತ ಹೊಂದಾಣಿಕೆ ಮಾಡಿಕೊಂಡು ಖಾತೆ ಕ್ಲೋಸ್ ಮಾಡಲಾಗಿದ್ದು, ಸದರ ವಿಷಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**(2) : ಶ್ರೀ ಡಿ. ಎ. ಪಾಟೀಲ (ವಜಾ)** ಇವರಿಂದ ಬ್ಯಾಂಕಿಗೆ ಬರತಕ್ಕ ಅವ್ಯವಹಾರದ ರಕಂ ವಸೂಲಾತಿ ಕುರಿತು.

**ಟಿಪ್ಪಣಿ:**

1) ಶಾಖೆಯ ಹೆಸರು: ಕರ್ಜಗಿ ಶಾಖೆ( ಹಾವೇರಿ ಶಾಖೆಗೆ 2002 ರಲ್ಲಿ ವಿಲೀನಗೊಂಡಿದೆ)

2) ಹಣದುರುಪಯೋಗದ ಮೊತ್ತ: ರೂ.43,200=00 + ಬಡ್ಡಿ ರೂ.225504=00 ಒಟ್ಟು ರೂ.268704=00

3) ಹಣದುರುಪಯೋಗದ ಪ್ರಕರಣ ಜರುಗಿದ ಅವಧಿ: ಸನ್ 1994-95 ರಲ್ಲಿ

4) ಹಣದುರುಪಯೋಗ ಮಾಡಿದ ಸಿಬ್ಬಂದಿಯ ಹೆಸರು: ಶ್ರೀ ಡಿ. ಎ. ಪಾಟೀಲ

5) ಹುದ್ದೆ: ಶಾಖಾ ವ್ಯವಸ್ಥಾಪಕರು

6) ಹಣದುರುಪಯೋಗದ ಸ್ವರೂಪ: ಸನ್ 1994-95ರ ಅವಧಿಯ ಸರ್ಕಾರಿ ಲೆಕ್ಕ ಪರಿಶೋಧನಾ ವರದಿಯಲ್ಲಿ ಗ್ರಾಹಕರು ಬ್ಯಾಂಕಿನಲ್ಲಿ ಒತ್ತಿ ಇಟ್ಟು ಸಾಲ ಪಡೆದ ಬಂಗಾರ ಆಭರಣಗಳನ್ನು ಸ್ವಂತಕ್ಕೆ ಉಪಯೋಗಪಡಿಸಿಕೊಂಡಿರುತ್ತಾರೆ.

7) ಹಣ ವಸೂಲಾತಿಗಾಗಿ ಕೈಕೊಂಡ ಕ್ರಮ; (1)ಪಂಚಾಯತ ದಾವಾ ಪ್ರಕರಣ ನಂ.ಜೆಆರ್‌ಎಲ್/ಬಿ/ಡಿಎಎಮ್/13//1996-97 ನ್ನು ದಾಖಲಿಸಿ, ದಿ:04-11-1997/23-03-1998 ರಂದು ಅವಾರ್ಡ ಪಡೆದು ದಿ:21-12-1999 ರಂದು ಸಹಾಯಕ ಸಂಘಗಳ ಸಹಾಯಕ ನಿಬಂಧಕರು ಧಾರವಾಡ ಇವರಲ್ಲಿ ಅಮಲಬಜಾವಣೆ ಪ್ರಕರಣ ದಾಖಲಿಸಿದೆ. ಸದರೀಯವರ ಆಸ್ತಿ ಇಲ್ಲದಿರುವುದರಿಂದ, ಸನ್ 1999 ರಿಂದಲೂ ಅಮಲ ಬಜಾವಣೆ ಪ್ರಕರಣದಲ್ಲಿ ಯಾವುದೇ ಪ್ರಗತಿಯಾಗಿರುವದಿಲ್ಲ.

.8)ಶಿಸ್ತು ಕ್ರಮ: ಸದರೀಯವರನ್ನು ದಿ:09-10-1996 ರಂದು ಬ್ಯಾಂಕಿನ ಸೇವೆಯಿಂದ ವಜಾಗೊಳಿಸಿದೆ.

9) ಕ್ರಿಮಿನಲ್‌ಕ್ರಮ: ದಿ:07-12-1996 ರಂದು ಹಾವೇರಿ ಪೋಲಿಸ್ ಸ್ಟೇಶನ್‌ದಲ್ಲಿ ಖಾಸಗಿ ಫಿರ್ಯಾದಿ ನಂ 193/96ನ್ನು ದಾಖಲಿಸಿತ್ತು. ನಂತರ ದೂರು ಅರ್ಜಿ ವಿಚಾರಣೆಗೆ ಮಾನ್ಯ ಜೆ.ಎಮ್.ಎಫ್.ಸಿ. ಹಾವೇರಿ ನ್ಯಾಯಾಲಯದಲ್ಲಿ ಸಿ.ಸಿ. ಪ್ರಕರಣ ಸಂಖ್ಯೆ 1026/97ನ್ನು ದಿ:19-03-1997 ರಂದು ದಾಖಲಿಸಿದೆ.

10)ಕ್ರಿಮಿನಲ್ ಪ್ರಕರಣದ ಹಂತ: ಮಾನ್ಯ ನ್ಯಾಯಾರದ ನಡುವಳಿಕೆಯಲ್ಲಿ ಶ್ರೀ ಡಿ. ಎ. ಪಾಟೀಲ ಇವರು ಮೃತರಾಗಿರುವದರಿಂದ ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣವನ್ನು ದಿ:26-05-2005 ರಂದು ಮುಕ್ತಾಯಗೊಳಿಸಿರುವದಾಗಿ ನಮೂದಿಸಿರುತ್ತಾರೆ. ಈ ಕುರಿತು ಮುಂದಿನ ಕ್ರಮ ಅನುಸರಿಸುವ ಬಗ್ಗೆ ಕಾನೂನು ಅಭಿಪ್ರಾಯವನ್ನು ಕೇಳಲಾಗಿ, ಆರೋಪಿಯು ಮೃತನಾಗಿದ್ದರಿಂದ ನ್ಯಾಯಾಲಯವು ಪ್ರಕರಣವನ್ನು ಮುಂದುವರೆಸಲು ಸಾಧ್ಯವಾಗುವದಿಲ್ಲ, ಸಂಬಂದಿಸಿದ ದಾಖಲೆಗಳಲ್ಲಿ ಮಾನ್ಯ ನ್ಯಾಯಾಲಯದ ಆದೇಶವನ್ನು ನಮೂದಿಸುತ್ತಾ ಪ್ರಕರಣ ಮುಕ್ತಾಯಗೊಳಿಸಲಾಗಿದೆ ಅಂತಾ ಶರಾ ಬರೆಯಲು ಬ್ಯಾಂಕಿನ ವಕೀಲರು ತಿಳಿಸಿರುವರು. ಕಾರಣ ಕ್ರಿಮಿನಲ್ ಪ್ರಕರಣದಲ್ಲಿ ಪ್ರಗತಿಯಾಗಿರುವದಿಲ್ಲ.

11) ಲೆಕ್ಕ ಪರಿಶೋಧನಾ ವರದಿ: ಬ್ಯಾಂಕಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಸದರ ಅವ್ಯವಹಾರದ ರಕಂ ವಸೂಲಾಗದೇ ಇರುವುದರಿಂದ, ಆಡಳಿತ ಮಂಡಳಿಯು ಸೂಕ್ತ ಕ್ರಮ ಕೈಕೊಳ್ಳಲು ಮತ್ತು ಮೊತ್ತದ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡು ರೈಟ್‌ಆಫ್ ಮಾಡಲು ಸೂಚಿಸಿರುವರು.

ಶಾಸನಬದ್ಧ ಲೆಕ್ಕಪರಿಶೋಧಕರು ಸೂಚಿಸಿದ ಪ್ರಕಾರ ರೂ.43200/- ಗಳನ್ನು ಬ್ಯಾಂಕಿನ ಆಢಾವೆ ರೈಟ್‌ಆಫ್ ಮಾಡುವ ಕುರಿತು ಆಡಳಿತ ಮಂಡಳಿಯಲ್ಲಿ ನಿರ್ಣಯಿಸಿದ್ದು. ವಾರ್ಷಿಕ ಮಹಾಸಭೆಯ ಅನುಮೋಧನೆಗಾಗಿಮಂಡಿಸಿದೆ.

**ವಿಷಯ-28 :**

**ಮೀಸಲು ಅಥವಾ ಇತರೆ ನಿಧಿಗಳ ವಾಸ್ತವಿಕ ಬಳಕೆಯ ವಿಮರ್ಶೆ.**

**ಟಿಪ್ಪಣಿ :**ಮೀಸಲು ಅಥವಾ ಇತರೆ ನಿಧಿಗಳ ಬಳಕೆಯನ್ನು ಮಾಡಿರುವುದಿಲ್ಲ.

**ವಿಷಯ-29 :**

**ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು**

**ವಿಷಯ-26 :**

**ವಸೂಲಾತಿ ಸಾಧ್ಯವಿಲ್ಲವೆಂದು ಪರಿಗಣಿಸಲಾದ ಕಟಬಾಕಿ (ಹೋಕು) ಸಾಲಗಳ ಬಗ್ಗೆ ತೀರ್ಮಾನ.**

**ಟಿಪ್ಪಣಿ :** ಅಂತಹ ಯಾವುದೇ ಪ್ರಸ್ತಾವೆಗಳು ಇರುವುದಿಲ್ಲ.

**ವಿಷಯ-27:**

**ಬ್ಯಾಂಕಿನ ಶಾಖೆಗಳಲ್ಲಿನ ಹಣಕಾಸಿನ ವ್ಯವಹಾರಗಳಲ್ಲಿ ಉಂಟಾದ ಲೋಪದ ಪ್ರಕರಣಗಳಲ್ಲಿ ರಿಯಾಯಿತಿಗೊಳಿಸಿ ಜಮಾ ಪಡೆದುಕೊಳ್ಳುವ ಕುರಿತು.**

ಸಹಿ/-

**(ಶ್ರೀ ಮುನಿಯಪ್ಪ ಕೆ)** ಕೆ.ಸಿ.ಎಸ್

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,

ಕೆ.ಸಿ.ಸಿ.ಬ್ಯಾಂಕ ಲಿ; ಧಾರವಾಡ.

# ಸನ್ 2022-2023 ನೇ ಸಾಲಿನ
# ಲೆಕ್ಕ ಪರಿಶೋಧಿತ
# ಜಮಾ ಖರ್ಚು, ಲಾಭ-ಹಾನಿ,
# ಅಢಾವೆ ಪತ್ರಿಕೆಗಳು

# ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ ಲಿ.,ಧಾರವಾಡ

## ದಿನಾಂಕ : 01/04/2022 ರಿಂದ 31/03/2023ರ ಅವಧಿಯ ಜಮಾ ಮತ್ತು ಖರ್ಚುಗಳು

| ವಿವರಗಳು | ಜಮಾ | ಖರ್ಚು |
|---|---|---|
| ಆರಂಭದ / ಕೊನೆಯ ಶಿಲ್ಕು | 8,72,31,246.00 | 17,04,37,820.00 |
| **ಶೇರು ಭಂಡವಾಳ** | | |
| ಸಂಘಗಳಿಂದ | 23,88,05,000.00 | 12,22,77,000.00 |
| ಸರಕಾರದಿಂದ | 0.00 | 0.00 |
| ಸಹ ಸದಸ್ಯರಿಂದ | 4,00,40,000.00 | 1,56,70,750.00 |
| **ಒಟ್ಟು** | **27,88,45,000.00** | **13,79,47,750.00** |
| **ನಿಧಿಗಳು** | | |
| ಸಹಕಾರ ಕಲ್ಯಾಣ ನಿಧಿ | 29,90,236.70 | 0.00 |
| ಪಿ.ಕೆ.ಪಿ.ಎಸ್. ಅಭಿವೃದ್ದಿ ನಿಧಿ | 0.00 | 0.00 |
| ಕಾಯ್ದಿಟ್ಟ ನಿಧಿಗಳು | 1,49,58,083.51 | 0.00 |
| ಮುಳಗುವ ನಿಧಿ | 31,99,553.27 | 0.00 |
| ಗುಂತಾವಣಿಗಳ ಏರಳಿತ ನಿಧಿ | 15,99,776.64 | 0.00 |
| ಕೃಷಿ ಪತ್ತಿನ ಸ್ಥಿರಿಕರಣ ನಿಧಿ | 89,70,710.11 | 0.00 |
| ವಿಶೇಷ ಮುಳಗುವ ನಿಧಿ | 0.00 | 0.00 |
| ಬಂಡವಾಳ ಮೀಸಲು ನಿಧಿ | 0.00 | 0.00 |
| ಕಟ್ಟಡ ನಿಧಿ | 1,04,11,534.93 | 0.00 |
| ಡಿವ್ಹಿಡೆಂಡ ಇಕ್ವಿಲಾಜೇಶನ್ ನಿಧಿ | 15,99,776.64 | 0.00 |
| ಸಿಬ್ಬಂದಿ ಕಲ್ಯಾಣ ನಿಧಿ | 1,38,72,136.00 | 69,36,068.00 |
| ಸಹಕಾರ ಶಿಕ್ಷಣ ನಿಧಿ | 8,97,071.01 | 8,97,071.01 |
| ಎನ್.ಪಿ.ಎ ಅನುವು (ಉತ್ತಮ) | 1,00,00,000.00 | 0.00 |
| ಧೇಣಿಗೆ ನಿಧಿ | 3,19,955.33 | 0.00 |
| ರೈತರ ಕ್ಷೇಮಾಭಿವೃಧ್ಧಿ ನಿಧಿ | 15,99,776.64 | 0.00 |
| **ಒಟ್ಟು** | **7,04,18,610.78** | **78,33,139.01** |
| **ಠೇವುಗಳು** | | |
| ಮುದ್ದತಿ ಠೇವುಗಳು | 9,95,48,32,610.53 | 9,47,56,58,547.46 |
| ಕೆ.ಸಿ.ಸಿ. ಮಿತ್ರ ಠೇವಣಿ | 65,19,40,185.73 | 2,30,36,663.01 |
| ಶ್ರೀ ಲಕ್ಷ್ಮೀ ಠೇವುಗಳು | 20,09,00,213.90 | 21,43,87,972.05 |
| ಸ್ಪೇಶಲ್ ಕುಮಿಲೇಟಿವ್ಹ ಠೇವುಗಳು | 4,14,03,951.50 | 3,53,10,290.00 |
| ಬದ್ರತಾ ಠೇವುಗಳು | 28,42,150.00 | 1,89,921.00 |
| ಸಿಬ್ಬಂಧಿ ಬದ್ರತಾ ಠೇವುಗಳು | 29,71,125.00 | 13,67,526.00 |
| ಪಿಗ್ಮಿ ಠೇವುಗಳು | 54,43,17,409.00 | 51,79,19,649.07 |
| ಆರ್.ಎಫ್.ಡಿ ಠೇವುಗಳು ಸಂಘಗಳ | 6,25,04,840.80 | 2,16,62,661.31 |
| ಉಳಿತಾಯ ಠೇವುಗಳು | 19,68,74,66,564.23 | 19,51,48,88,342.80 |

## ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ ಲಿ.,ಧಾರವಾಡ

### ದಿನಾಂಕ : 01/04/2022 ರಿಂದ 31/03/2023 ರ ಅವಧಿಯ ಜಮಾ ಮತ್ತು ಖರ್ಚುಗಳು

| ವಿವರಗಳು | ಜಮಾ | ಖರ್ಚು |
|---|---|---|
| ಚಾಲ್ತಿ ಠೇವುಗಳು | 12,83,99,63,784.96 | 12,86,68,57,326.20 |
| ಹಕ್ಕು ಪಡೆಯದ ಠೇವುಗಳು | 21,336.18 | 21,336.18 |
| **ಒಟ್ಟು** | **43,98,91,64,171.83** | **42,67,13,00,235.08** |
| **ತಂದ ಸಾಲಗಳು** | | |
| ಅಲ್ಪಾವಧಿ ಸಾಲ (ಅಪೆಕ್ಸ್ ಬ್ಯಾಂಕಿನಿಂದ) | 4,15,00,00,000.00 | 1,80,00,00,000.00 |
| ಅಪೆಕ್ಸ್ ಬ್ಯಾಂಕಿನಿಂದ ಠೇಣಿಯ ಮೇಲೆ ಸಾಲ | 8,50,00,000.00 | 8,50,00,000.00 |
| ಸಾಲ ಸಹಕಾರ ಸಂಘ | 2,000.00 | 2,000.00 |
| ಮಾಧ್ಯಮಿಕ ಸಾಲ ಟ್ರ್ಯಾಕ್ಟರ | 35,25,55,450.00 | 21,75,73,523.00 |
| ಮಾಧ್ಯಮಿಕ ಸಾಲ ಪಿ.ಓ.ಡಿ.ಎಪ | 0.00 | 16,18,200.00 |
| ಅಲ್ಪಾವಧಿ ಸಾಲ (ಅಪೆಕ್ಸ್ ಬ್ಯಾಂಕಿನಿಂದ) ಕೋವಿಡ್-19 | 0.00 | 41,00,00,000.00 |
| ಅಲ್ಪಾವಧಿ ಸಾಲ ವಿವಿದೊದ್ದೇಶಗಳ ಸಿಸಿ ಸಾಲ | 50,00,00,000.00 | 0.00 |
| ಅಲ್ಪಾವಧಿ ಸಾಲ ಇತರೆ | 0.00 | 26,00,00,000.00 |
| ಕೃಷಿ ಪತ್ತಿನ ಸಂಘಗಳ ಮಲ್ಟಿ ಸರ್ವಿಸ ಸೆಂಟರ ಸಾಲ | 5,26,37,000.00 | 48,29,504.00 |
| **ಒಟ್ಟು** | **5,14,01,94,450.00** | **2,77,90,23,227.00** |
| ಸಿ.ಸಿ ಸಾಲಗಳು | 5,81,93,771.80 | 5,81,93,771.82 |
| ಸಿ.ಸಿ ಸಾಲಗಳು ಇತರೆ ಹೈಪೋಥಿಕೇಶನ | 1,62,77,46,085.55 | 1,63,21,65,866.55 |
| ಠೇವಣಿಗಳ ಮೇಲೆ ಪಾವತಿಸಬೇಕಾದ ಬಡ್ಡಿ | 2,18,69,97,984.52 | 2,15,15,63,961.81 |
| ಸಿಸಿ ಮೇಲೆ ಪಾವತಿಸಬೇಕಾದ ಬಡ್ಡಿ | 15,930.00 | 15,730.00 |
| **ಇತರೇ ಹೊಣೆಗಾರಿಕೆಗಳು** | | |
| ಟಿ.ಸಿ.ಎಸ ಬಿಲ್ಲುಗಳ ಅನುವು | 65,21,948.28 | 34,58,159.00 |
| ಸ್ಥಳಿಯ ಕ್ಲಿಯರಿಂಗ | 5,08,55,361.95 | 5,07,95,361.95 |
| ಎಸ್.ಡಿ.ಗುರುತಿಸಲಾಗದ | 4,05,87,286.00 | 4,05,63,436.00 |
| ಪಿ.ಕೆ.ಪಿ.ಎಸ್.ಗೆ ಪಾವತಿಸಬೇಕಾದ ಬೆಳೆ ವಿಮೆ | 0.00 | 35,33,787.00 |
| ಗ್ರುಪ್ ಗ್ರಾಯಾಚುಟಿ ಕೊಡತಕ್ಕ | 0.00 | 0.00 |
| ಎನ್.ಎಂ ಫೀ | 100.00 | 100.00 |
| ಸರಫ್ ಮೌಲ್ಯಮಾಪನ ಬಾಬತ್ತು | 10,969.00 | 10,969.00 |
| ಬಂಗಾರ ಆಭರಣಗಳ ವಿಮೆ ಕಂತು | 70.00 | 70.00 |
| ಗ್ರುಪ್ ಗ್ರಾಯಾಚುಟಿ ಕೊಡತಕ್ಕ ಪಂಡ್ | 1,42,19,922.57 | 37,33,707.00 |
| ಸರಕಾರಿ ಸಹಾಯಧನ | 8,74,500.00 | 2,49,200.00 |
| ಪಿಗ್ಮಿ ಏಜೆಂಟ್ ಟಿ.ಡಿ.ಎಸ | 7,58,710.50 | 7,55,500.00 |
| ರೈತರ ಕೂಟಗಳು | 2,27,115.00 | 2,27,115.00 |
| ಕಟ್ಟಡ ದುರಸ್ಥಿಯ ಕೂಟಗಳು | 0.00 | 0.00 |
| ಕ್ಲಿಯರಿಂಗ ಅಮಾನತ | 3,06,83,918.05 | 3,06,83,918.05 |

# ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ ಲಿ.,ಧಾರವಾಡ

## ದಿನಾಂಕ : 01/04/2022 ರಿಂದ 31/03/2023ರ ಅವಧಿಯ ಜಮಾ ಮತ್ತು ಖರ್ಚುಗಳು

| ವಿವರಗಳು | ಜಮಾ | ಖರ್ಚು |
|---|---|---|
| ಹೆಚ್ಚಿನ ಶಿಲ್ಕು | 6,900.00 | 6,900.00 |
| ಸಿಬ್ಬಂದಿ ಪಗಾರ | 2,34,11,958.85 | 1,81,80,863.00 |
| ಲೆಕ್ಕಪರಿಶೋಧಕರ ಪಗಾರ ಅನುವು | 18,60,000.00 | 13,12,500.00 |
| ಪಿಗ್ಮಿ ಅಮಾನತ | 50,42,49,968.00 | 50,42,44,372.00 |
| ಪಿ.ಎಪ್. ಕೊಡತಕ್ಕ | 5,40,13,607.31 | 5,37,07,875.28 |
| ಗ್ರುಪ್ ಇನ್ಸು ರನ್ಸ | 2,46,900.00 | 2,55,200.00 |
| ವೃತ್ತಿ ತೆರಿಗೆ | 6,82,400.00 | 6,78,600.00 |
| ಅರನೆಸ್ಟ ಮನಿ ಡಿಪಾಜಿಟ್ | 12,78,560.00 | 11,03,033.00 |
| ಶೇರ ಅಮಾನತ | 27,72,77,965.00 | 27,84,52,345.00 |
| ಬಂಗಾರ ಆಭರಣಗಳ ಮೌಲ್ಯಮಾಪಕರ ಫೀ | 30,31,178.00 | 30,31,178.00 |
| ಸ್ಟೇಲ ಚೆಕ್ | 19,227.00 | 0.00 |
| ಯಶಸ್ವಿನಿ ವಿಮೆ | 3,91,10,615.00 | 3,75,23,700.00 |
| ಪಾವತಿಸಬೇಕಾದ ಡಿವ್ಹಿಡೆಂಡ | 1,01,12,528.00 | 99,59,952.00 |
| ಭವಿಷ್ಯ ನಿಧಿ | 0.00 | 24,145.00 |
| ಸಿಬ್ಬಂದಿ ಆದಾಯ ತೆರಿಗೆ ಖಾತೆ | 10,00,500.00 | 10,00,500.00 |
| ಗಣಕಯಂತ್ರ ನಿರ್ವಹಣೆ | 0.00 | 1,46,500.00 |
| ಲಾಭ | 5,98,04,734.05 | 5,98,04,734.05 |
| ಸಿಬ್ಬಂಧಿ ಪಗಾರ (ಎಚ.ಆರ.ಎಂ.ಎಸ) | 13,50,01,350.84 | 13,46,25,796.54 |
| ಗ್ರುಪ್ ಗ್ರಯಾಚುಟಿ ಕೊಡತಕ್ಕ | 1,76,30,117.00 | 1,51,73,552.00 |
| ವಾಹನಗಳ ನಿಧಿ | 31,99,553.27 | 0.00 |
| ನಗದು ಟಿಡಿಎಸ್ | 14,48,901.00 | 8,15,818.00 |
| ಪಿ.ಕೆ.ಪಿ.ಎಸ್ .ಡಿ.ಎಸ್.ಸಿ. ಫೀಸ್ | 2,14,500.00 | 2,14,500.00 |
| ಅಧ್ಯಯನ ಪ್ರವಾಸಕ್ಕಾಗಿ ನಿಬಂಧನೆ | 30,00,000.00 | 0.00 |
| ಪ್ರೋತ್ಸಾಹಿಕ ಟಾಸಿಗಳಿಗೆ ನಿಬಂಧನೆ | 1,40,00,000.00 | 1,25,25,000.00 |
| ಆರ.ಟಿ.ಜಿ.ಎಸ ಅಮಾನತ | 5,19,43,547.60 | 5,03,43,547.60 |
| 2% ಟಿ.ಡಿ.ಎಸ್. ನಗದು ವ್ಯವಹಾರಕ್ಕೆ | 44,42,253.00 | 44,42,253.00 |
| **ಅಮಾನತ ಖಾತೆಗಳು** | | |
| ಶಾಖೆಗಳ ಹುಂಡಿಗಳ ವ ಇತರೆ | 0.00 | 5,98,04,734.05 |
| ಇನ್ಕಾ ವ್ಯಯಕ್ತಿಕ ಸಿಬ್ಬಂದಿ | 14,373.00 | 24,882.00 |
| ಇನ್ಕಾ ವ್ಯಯಕ್ತಿಕ | 10,81,001.00 | 3,06,134.00 |
| ಇನ್ಕಾ | 2,282.00 | 0.00 |
| ಇನ್ಕಾ ಜೆ.ಎಲ್.ಜಿ | 3,845.00 | 3,845.00 |
| ಇನ್ಕಾ ಸಂಘಗಳ | 4,47,378.00 | 3,65,154.00 |

# ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ ಲಿ.,ಧಾರವಾಡ

## ದಿನಾಂಕ : 01/04/2022 ರಿಂದ 31/03/2023ರ ಅವಧಿಯ ಜಮಾ ಮತ್ತು ಖರ್ಚುಗಳು

| ವಿವರಗಳು | ಜಮಾ | ಖರ್ಚು |
|---|---|---|
| ಟ.ಡಿ.ಎಸ ಠೇವಣಿಗಳು | 1,02,74,588.14 | 84,09,505.47 |
| ಅಮಾನತ ಖಾತೆ | 83,49,72,204.21 | 82,37,13,879.37 |
| ಎಲ್ ಆಯ್.ಸಿ. | 23,49,953.00 | 22,99,376.00 |
| ಬಂಗಾರ ಆಭರಣಗಳ ವಿಮೆ ಕಂತು | 2,17,353.00 | 2,17,313.00 |
| ಎನ್.ಎಂ ಫೀ | 13,01,518.00 | 13,01,518.00 |
| ಮಾರಾಟ ಮಾಡಿದ ಮುದ್ರಿತ ಸಾಮಗ್ರಿಗಳು | 57,23,909.00 | 57,24,219.00 |
| ಪ್ರವೇಶ ಫೀ | 5,10,702.00 | 5,10,702.00 |
| ವೇತದಿಂದ ಟಿ.ಎಫ್ ಅನಪೋಸ್ಟೇಡ | 1,32,67,479.70 | 1,32,24,139.70 |
| ವೇತಕ್ಕೆ ಟಿ.ಎಫ್ ಅನಪೋಸ್ಟೇಡ | 3,54,46,069.18 | 3,54,41,483.42 |
| ಸ್ಟ್ಯಾಂಪ ಡ್ಯುಟಿ | 6,23,206.00 | 12,786.00 |
| ರಾಜಿಯಾಗದ ಪ್ರಿಕ್ಷಿಯಸ್ ಎ.ಸಿ.ಸಿ. ಎಲ್ | 0.00 | 69,36,068.00 |
| ಇತರೆ ಅಮಾನತ ರಕಂಗಳು | 21,83,71,777.89 | 17,08,69,494.31 |
| ಟ.ಡಿ.ಎಸ ಕೊಡತಕ್ಕವುಗಳು | 1,83,83,243.58 | 1,82,49,136.66 |
| ಬಿಲ್ಸ ಕಲೆಕ್ಷನ್ಸ ಗಳು | 31,09,480.00 | 31,09,480.00 |
| **ಸಿಸ್ಟಮ್ ಸಸ್ಪೆನ್ಸ ಖಾತೆ** | | |
| ಕೋರ ಇಂಟರ ಬ್ರಾಂಚ್ | 49,53,53,34,445.48 | 49,53,53,34,445.48 |
| ಅಮಾನತ ಖಾತೆ | 1,36,16,31,271.75 | 1,36,16,45,494.75 |
| ಎ.ಟಿ.ಎಂ. ಹುಂಡಿಗಳ ಅಮಾನತ | 1,52,34,93,673.53 | 1,52,60,67,838.53 |
